SUPPLY OF POWER FOR IRRIGATION PUMP SETS IN CHAMARAJANAGAR TALUK.

*Q.—545. Sri B. RACHAIAH (Chamarajanagar) :—

Will the Government be pleased to state:—

(a) the number of applications received for supply of power for irrigation pump sets in Chamarajanagar taluk for the last 3 years ;

(b) the number of estimates sanctioned during the above period ;

(c) the number of estimates pending execution for want of materials ?

A.—Sri H. K. VEERANNA GOWDH (Minister for Public Works and Electricity).—

(a) 161.

(b) 101.

(c) 27.

BUDGET ESTIMATES FOR 1961-62

Voting of Demand for Grants.

Demand No. 23– Agriculture, Horticulture and Fisheries.

Sri N. RACHIAH (Minister for Agriculture and Social Welfare).—Sir, on the recommendation of the Governor of Mysore, I beg to move :

"That a sum not exceeding Rs. 2,55,08,000 be granted to the Government to defray the charges which will come in course of payment during the financial year for the period ending 31st day of March 1962, in respect of 'Agriculture'."

Mr. SPEAKER.—Motion moved:

"That a sum not exceeding Rs. 2,55,08,000 be granted to the Government to defray the charges which will come in course of payment during the financial year for the period ending 31st day of March 1962, in respect of 'agriculture'."

I must also announce that the other demands are also before the House namely:

Demand No. 24—Rural Development.

Demand No. 25—Animal Husbandry.

Damand No. 26—Co-operation.

Demand No. 28—A Community Development protects, National extension service and Local Development Works.

Sri C. J. MUCKANNAPPA.—None of the cut-motions are made available.

Mr. SPEAKER.—I will see. Before I call upon Members, I have to announce that the first speech from the Opposition will get half-an-hour and all the other speeches will get 15 minutes each.

†ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಸ್ವಾಮಿ, ವ್ಯವಸಾಯಕ್ಕೆ ನಮ್ಮ ಸರ್ಕಾರದವರು ಎರಡು ಕೋಟಿ 55 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಿರುವುದನ್ನು ತೋರಿಸಿದ್ದಾರೆ. ಇದರ ಮೇಲೆ ಈ ವ್ಯವಸಾಯ ಇಲಾಖೆ ಹೇರಿಂಟ್ ಡಿಪಾರ್ಟ್‌ಮೆಂಟ್. ಇಂಥಾ ಇಲಾಖೆಗೆ ನಮ್ಮ ಮಂತ್ರಿಗಳು ಇಷ್ಟು ಕಡಮೆ ಹಣವನ್ನು ಒದಗಿಸುವುದಕ್ಕೆ ಯಾವ ರೀತಿ ಒಪ್ಪಿಕೊಂಡರೋ ನನಗೆ ಗೊತ್ತಾಗಲಿಲ್ಲ. ಈ ಇಲಾಖೆಗೆ ಹೆಚ್ಚು ಹಣ ಒದಗಿಸುವುದು ನ್ಯಾಯ. ರೈತರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಹೆಚ್ಚಿಗೆ ಆಹಾರವನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹಿಂದೆಯೇ ಹೇಳಿದ್ದಾರೆ. ಅವರು ಅಧಿಕಾರಕ್ಕೆ ಬಂದರಾಗಾಯಿತು ದೇಶದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಗೂ ಆಹಾರವನ್ನು ಒದಗಿಸುತ್ತೇನೆಂದು ಹೇಳಿಕೊಂಡೇ ಬಂದಿದ್ದಾರೆ. ಈಗಾಗಲೇ ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳು ಕಳೆದರೂ ಕೂಡ ಸಾಕಷ್ಟು ಆಹಾರೋತ್ಪತ್ತಿ ನಮಗೆ ಬರುತ್ತಲೇ ಇಲ್ಲ. ಇದಕ್ಕೇನು ದೋಷವಿದೆ, ಏನು ತೊಂದರೆ ಇದೆಯೆಂಬುದನ್ನು ಪರಿಶೀಲನೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ನಾನು ಹೇಳುವುದಿಷ್ಟೆ ಸರ್ಕಾರದವರು ಪ್ರತಿಯೊಬ್ಬ ರೈತನಿಗೂ ಸಾಕಾದಷ್ಟು ಸಹಾಯ ಮಾಡಬೇಕು. ಹಿಂದೆ ಬ್ರಿಟಿಷ್ ಸಾಮ್ರಾಜ್ಯದ ಸರ್ಕಾರ ಬರುವುದಕ್ಕೆ ಮುಂಚೆ ಸರ್ಕಾರದವರು ಗ್ರೀನ್ ಮ್ಯಾನ್ಯೂರ್ ಬೆಳೆಯುವುದಕ್ಕೆ ಕೆಮಿಕಲ್ ಮಿಕ್ಸ್ಚರ್ಸ್‌ನ್ನು ಫೇರ್ ಪ್ರೈಸಿನಲ್ಲಿ ಕೊಡುತ್ತಿದ್ದರು. ಈಗ ಆತರಹ ರಿಯಾಯತಿಯನ್ನು ರೈತರಿಗೆ ಸರ್ಕಾರದವರು ಮಾಡುತ್ತಲೇ ಇಲ್ಲ. ಅವರು ಇಂಟೆಲಿಜೆಂಟಾಗಿ ಮಾಡಬಲ್ಲವರೇ? ವ್ಯವಸಾಯ ಮಾಡಿ ಫಲವನ್ನು ಹೆಚ್ಚಿಗೆ ಪಡೆಯುವುದಕ್ಕೆ ಅವಕಾಶವಿತ್ತು. ಆದ್ದರಿಂದ ರೈತರಿಗೆ ಹೆಚ್ಚಿಗೆ ಸಹಾಯ ಮಾಡಬೇಕು. ರೈತರು ಚೆನ್ನಾಗಿ ವ್ಯವಸಾಯ ಮಾಡಿದರೆ ಅದರಿಂದ ಸರ್ಕಾರಕ್ಕೆ ಹೆಚ್ಚಿನ ಲಾಭವುಂಟಾಗುತ್ತದೆ. ಆದ್ದರಿಂದ ಎಲ್ಲ ವಿಧದಲ್ಲೂ ರೈತರಿಗೆ ಸರ್ಕಾರದವರು ಹೆಚ್ಚಿಗೆ ಸಹಾಯ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಎಂಟು ಲಕ್ಷ ಟನ್ನುಗಳಷ್ಟು ಈ ವರ್ಷ ಹೆಚ್ಚಿಗೆ ಬೆಳೆದು ಒಟ್ಟು ಯೋಜನೆಯಲ್ಲಿ 42½ ಲಕ್ಷ ಟನ್ನುಗಳಷ್ಟು ಬೆಳೆಯುತ್ತೇವೆ. ಈಗ ಬೇಕಾದಷ್ಟು ಆಹಾರವನ್ನು ಒದಗಿಸಬಹುದು ಎಂದು ಹೇಳುತ್ತಿದ್ದಾರೆ; ಮೊದಲನೆಯ ವರ್ಷ ಹೀಗೆ ಹೇಳುತ್ತಾರೆ. ಆಮೇಲೆ ಬೇರೆ ರೀತಿಯಲ್ಲಿ ಹೇಳುತ್ತಾರೆ. ಹೊರನಾಡಿನಿಂದ ಆಹಾರ ಪದಾರ್ಥಗಳನ್ನು ತರದೇ ಇರುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಏಕೆಂದರೆ ಹಿಂದಿನ ಅನುಭವ ನೋಡಿದರೆ ಅವರು ಸುಮ್ಮನೆ ಹಾಗೆ ಹೇಳುತ್ತಿದ್ದಾರೆ ಎಂಬುದಾಗಿ ಗೊತ್ತಾಗುತ್ತದೆ. ಒಟ್ಟಿನಲ್ಲಿ ನಮಗೆ ಸಾಕಷ್ಟು ಆಹಾರವನ್ನು ಒದಗಿಸುತ್ತಲೇ ಇಲ್ಲ ಜನಗಳಿಗೆ ಆಹಾರ ತೊಂದರೆಯೂ ಕೂಡ ತಪ್ಪಿಲ್ಲ. ಅದಕ್ಕಾಗಿ ನಾವು ಹೆಚ್ಚಿಗೆ ಜನಗಳಿಗೆ ಸಹಾಯ ಮಾಡಬೇಕು. ಅವರು ರಾಜ್ಯಪಾಲರ ಭಾಷಣದಲ್ಲಿ ಈರೀತಿ ಹೇಳಿದ್ದಾರೆಂದು ಹೇಳಿದರು. ರೈತರಿಗೆ ಅಕ್ಕಿ ಕೊರತೆ ಇದೆಯೆಂದು ಹೇಳಿದ್ದಾರೆ. ಅದಕ್ಕೋಸ್ಕರವಾಗಿಯೇ 13 ಸಾವಿರ ಟನ್ನುಗಳಷ್ಟು ಅಕ್ಕಿಯನ್ನು ಮಧ್ಯ ಪ್ರದೇಶದಿಂದ ತರುತ್ತಿದ್ದೇವೆಂದು ಹೇಳಿದ್ದಾರೆ. ಈ ಕೊರತೆಯನ್ನು ನೀಗಿಸುವುದಕ್ಕೆ ತಮ್ಮ ಕೈಲಿ ಸಾಧ್ಯ. ಅದಕ್ಕಾಗಿ ಹೆಚ್ಚಿಗೆ ಗೊಬ್ಬರ, ಮ್ಯಾನ್ಯೂರ್ ಸೀಡ್ಸನ್ನು ಸಬ್ಸಿಡೈಜ್ಡ್ ರೇಟಿನಲ್ಲಿ ರೈತರಿಗೆ ಕೊಟ್ಟು ಫ್ರೀಯಾಗಿ ಅವನ್ನು ಎಲ್ಲರಿಗೂ ಹಂಚಿ ದೇಶದಲ್ಲಿ ಹೆಚ್ಚು ಆಹಾರ ಬೆಳೆಯುವುದಕ್ಕೆ ತಕ್ಕ ಸಹಾಯ ಮಾಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಇನ್ನು ಕೆಮಿಕಲ್ ಮಿಕ್ಸ್ಚರ್ಸ್ ವಿಷಯ. ಇದನ್ನು ಸೊಸೈಟಿಗಳ ಮೂಲಕ ಸಪ್ಲೈ ಮಾಡುತ್ತಿದ್ದೀರಿ. ಇದರಿಂದ ಏನಾಗುತ್ತದೆಂದರೆ ಸೊಸೈಟಿಗಳಿಂದ ನೇರವಾಗಿ ರೈತರಿಗೆ ಇದು ಸಿಗುತ್ತಾ ಇಲ್ಲ. ಅದೆಲ್ಲಾ ಬ್ಲಾಕ್ ಮಾರ್ಕೆಟ್ಟಿಗೆ ಹೋಗುತ್ತಿದೆ. ಇದರಿಂದ ರೈತರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೆಚ್ಚಿಗೆ ದುಡ್ಡು ಕೊಟ್ಟು ತೆಗೆದುಕೊಳ್ಳಬೇಕಾಗುತ್ತದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ನನ್ನ ಮಾನ್ಯ ಮಿತ್ರರನೇಕರು ತಂದಿದ್ದಾಗ್ಯೂ ಸಹ ಆ ಬಗ್ಗೆ ಸರ್ಕಾರದವರು ಯಾವ ಸರಿಯಾದ ಕಾರ್ಯ

ಕ್ರಮವನ್ನು ತೆಗೆದು ಕೊಂಡಿಲ್ಲ, ಸೊಸೈಟಿಗಳಿಗೆ ಈಗ ನೀವು ಸಪ್ಲೈ ಮಾಡುತ್ತಿದ್ದೀರಿ. ಹಿಂದೆ ಇಲಾಖೆಯ ಅಧಿಕಾರಿಗಳಿಗೆ ಭಯವಿತ್ತು, ಆದ್ದರಿಂದಲೇ ಬ್ಲ್ಯಾಕ್ ಮಾರ್ಕೆಟ್ಟಿಗೆ ಕಳುಹಿಸುತ್ತಿರಲಿಲ್ಲ ರೈತರಿಗೆ ಕಡಿಮೆ ರೇಟಿನಲ್ಲಿ ಕೊಡುತ್ತಿದ್ದರು. ಇವತ್ತಿನ ದಿವಸ ಸೊಸೈಟಿಗೆ ಕೊಡುವುದರಿಂದ ಕೊನೆಯ ಪಕ್ಷ 100 ರೂಪಾಯಿಗಳ ಕಮಿಷನ್ ಕೊಟ್ಟು ಆ ರೀತಿ ತೆಗೆದು ಕೊಂಡರೂ ಕೂಡ ಅದರಿಂದ ಯಾವ ರೀತಿಯಾದ ಅನುಕೂಲವೂ ಸಿಗುತ್ತಾ ಇಲ್ಲ. ಬೇರೆಕಡೆ ಹೋಗಿ ಅಲ್ಲೆಲ್ಲಾ ಬ್ಲ್ಯಾಕ್ ಮಾರ್ಕೆಟಿನಲ್ಲಿ ವಿನಿಯೋಗವಾಗುತ್ತಿದೆ. ಇಂಥಾದ್ದನ್ನೆಲ್ಲಾ ತಪ್ಪಿಸಬೇಕಾದದು ಸರ್ಕಾರದ ಕರ್ತವ್ಯವೆಂದು ನಾನು ಸಲಹೆ ಮಾಡುತ್ತೇನೆ.

ಸರ್ಕಾರಿ ಡಿಪೋಗಳಿವೆ, ಫೀಲ್ಡ್‌ಮೆನ್ ಮತ್ತು ಇನ್‌ಸ್ಪೆಕ್ಟರುಗಳಿದ್ದಾರೆ. ಅವರ ಮೂಲಕ ಸಪ್ಲೈ ಮಾಡಿದರೆ ಒಳ್ಳೆಯದು. ಹಿಂದೆ ಏನೂ ತೊಂದರೆಯಿರಲಿಲ್ಲ. ಬ್ಲ್ಯಾಕ್‌ಮಾರ್ಕೆಟ್ಟಿಗೆ ಹೋಗುತ್ತಿರಲಿಲ್ಲ. ರೈತನಿಗೆ ಕಾಲಕ್ಕೆ ಸರಿ ಯಾಗಿ ಸಿಕ್ಕುತ್ತಿತ್ತು. ಈಗ ಅಮೋನಿಯಂ ಸಲ್ಫೇಟ್ ಮತ್ತು ಸೂಪರ್ ಫಾಸ್ಫೇಟ್ ಸಾಕಾದಷ್ಟು ಪ್ರಮಾಣದಲ್ಲಿ ಬರುತ್ತಿಲ್ಲ. ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವಾಗ ಸಕಾಲದಲ್ಲಿ ಗೊಬ್ಬರ ರೈತರಿಗೆ ಒದಗದೆ ಇದ್ದರೆ ಹೇಗೆ ತಾನೇ ಅವನು ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯ ಇಲಾಖೆಯ ಮೂಲಕ ಸರಬರಾಜು ಮಾಡದೆ ಸೊಸೈಟಿಗಳ ಮೂಲಕ ಮಾಡಿದರೆ ಬಹಳ ಅಕ್ರಮಗಳು ನಡೆಯುತ್ತವೆ. ಇದನ್ನು ತಾವು ನಿಲ್ಲಿಸಬೇಕು ಇಲ್ಲದೆ ಇದ್ದರೆ ಇಲಾಖೆಯ ಮೂಲಕ ಸರಬರಾಜು ಮಾಡಬೇಕು. ಫೀಲ್ಡ್‌ಮನ್ ಮತ್ತು ಇನ್‌ಸ್ಪೆಕ್ಟರುಗಳಿರುವುದರಿಂದ ಲೋಪಕ್ಕೆ ಅವಕಾಶವಿರುವುದಿಲ್ಲ ಬ್ಲ್ಯಾಕ್ ಮಾರ್ಕೆಟ್ಟಿಗೆ ಹೋಗುವುದಿಲ್ಲ, ಜನಗಳಿಗೆ ತೊಂದರೆ ಯಿರುವುದಿಲ್ಲ, ಕಾಲಕ್ಕೆ ಸರಿಯಾಗಿ ಸಿಕ್ಕುತ್ತದೆಂದು ನನ್ನ ಅಭಿಪ್ರಾಯವಾಗಿದೆ.

ವ್ಯವಸಾಯದ ಮುಟ್ಟುಗಳು ಅಷ್ಟೇ. ಇವೂ ಬ್ಲ್ಯಾಕ್ ಮಾರ್ಕೆಟ್ಟಿಗೆ ಹೋಗುತ್ತವೆ. ಒಂದು ಗುಳಕ್ಕೆ ಹನ್ನೆರಡಾಣೆ ಬೆಲೆಯಾದರೆ ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಒಂದೂಕಾಲೂ ರೂಪಾಯಿ, ಒಂದು ರೂಪಾಯಿ ಆರಾಣೆ ಕೊಟ್ಟು ತೆಗೆದುಕೊಳ್ಳಬೇಕು. ಇದನ್ನೆಲ್ಲ ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಆಹಾರದ ಕೊರತೆ ಹೆಚ್ಚಾಗಿರುವುದರ ಕಾರಣವೇನೆಂದರೆ ಬೆಳೆಗಳಿಗೆಲ್ಲ Stem borer ಎಂಬ ಕೀಟಗಳು ಬೀಳುತ್ತಿವೆ. ಈ ಬಗ್ಗೆ ಹಿಂದೆ ಒಂದು ಕಾಗದವನ್ನೂ ಬರೆದಿದ್ದೆ. ಭತ್ತ ತೆನೆ ಬಿಡುವ ಕಾಲದಲ್ಲಿ ಈ ಕೀಟಗಳು ಗಿಣ್ಣನ್ನು ಕೊರೆಯುತ್ತವೆ. ಆಗ ಕಾಳು ಬಿಡುವುದಿಲ್ಲ ಬರೀ ಜೊಳ್ಳು ಬತ್ತ ಬರುತ್ತದೆ. ಸೇಕಡ 25–30 ರಷ್ಟು ಇದರಿಂದ ನಷ್ಟವಾಗಿದೆ. ಇದರ ವಿಚಾರದಲ್ಲಿ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ಕ್ರಿಮಿಕೀಟಗಳಿಂದ ಆಗುವ ನಷ್ಟವನ್ನು ತಪ್ಪಿಸಲು ಎಲ್ಲ ಜಮೀನುಗಳಲ್ಲಿಯೂ Spraying ಮಾಡಬೇಕು. ಅದಕ್ಕೆ ತಗಲುವ ಖರ್ಚಿಗಾಗಿ ಇಷ್ಟು percetage ರೈತರು ಕೊಡಬೇಕೆಂದು ವಸೂಲು ಮಾಡಿದರೂ ಅದನ್ನು ಕೊಡುವುದಕ್ಕೆ ಸಹ ನಾವು ಸಿದ್ಧರಾಗಿದ್ದೇವೆ. ಬೆಳೆಗೆ ಬೀಳುವ ಕ್ರಿಮಿಕೀಟಗಳನ್ನು ನಾಶಮಾಡಿ ಅದಕ್ಕೆ ರೋಗ ಬರದಂತೆ ತಡೆಗಟ್ಟಬೇಕು. ಇದು ಬತ್ತಕ್ಕೆ ಮಾತ್ರವಲ್ಲ ರಾಗಿ, ಜೋಳ ಮುಂತಾದ ಎಲ್ಲ ಬೆಳೆಗಳಿಗೂ ಬರುತ್ತದೆ. ಇದರಿಂದ ಸೇಕಡ 25–30 ಭಾಗ ನಷ್ಟವಾಗುವುದನ್ನು ತಡೆಗಟ್ಟಬೇಕು. ಇದರ ನಿವಾರಣಾ ಕ್ರಮಗಳ ವಿಚಾರದಲ್ಲಿ ರೈತರ ಜಮೀನುಗಳಲ್ಲಿ demonstations ಮಾಡಲು ಹೆಚ್ಚಿಗೆ ಅವಕಾಶ ಕಲ್ಪಿಸಿ ರೈತನಿಗೆ ತಿಳುವಳಿಕೆ ಕೊಡಬೇಕು. ಇದರಿಂದ ರೈತ ಹೆಚ್ಚು ಬೆಳೆಯುವುದಕ್ಕೆ ಸಹಕಾರಿಯಾಗುತ್ತದೆ. ಮತ್ತೊಂದು ವಿಚಾರವೇನೆಂದರೆ ರಾಗಿ, ಬತ್ತ, ಜೋಳ ಇವನ್ನು ಯಾವಾಗ ಯಾವ ರೀತಿ ಬೆಳೆದರೆ ಹೆಚ್ಚು ಉತ್ಪನ್ನ ಬರುತ್ತದೆನ್ನುವ ವಿಚಾರದಲ್ಲಿ ಪ್ರಚಾರ ಕಾರ್ಯ ನಡೆಯುತ್ತಿಲ್ಲ. ಹೆಚ್ಚು ಪ್ರಚಾರ ನಡೆಸಿ ರೈತನು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ತಾವು ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಶ್ರೀ ಬಿ. ಚಾಮಯ್ಯ)

ನಾನು ತಿಳಿದುಕೊಂಡಿರುವ ಹಾಗೆ ನಾಲ್ಕು ಲಕ್ಷ ಎಕರೆ ಜಮೀನನ್ನು ದರಖಾಸ್ತಿನಲ್ಲಿ ಸರ್ಕಾರದವರು ಕೊಟ್ಟಿದ್ದಾರೆ. ಇದರ ಪೈಕಿ ಎಷ್ಟು ಜಮೀನು ಸಾಗುವಳಿ ಬಂದಿದೆ ಎನ್ನುವುದು ಗೊತ್ತಿಲ್ಲ. ಈ ಜಮೀನುಗಳನ್ನು ಪಡೆದಿರುವವರಿಗೆ ಅದರಲ್ಲಿ ವ್ಯವಸಾಯ ಮಾಡುವುದಕ್ಕೆ ಶಕ್ತಿಯಿದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಿಲ್ಲ. ನಾಲ್ಕು ಲಕ್ಷ ಎಕರೆ ಜಮೀನನ್ನೂ ವ್ಯವಸಾಯಕ್ಕೆ ಲಾಯಖ್ಖಾಗಿರುವಂತೆ ಮಾಡಿ ಅದನ್ನು ಮಟ್ಟ ಮಾಡಿ, ಜಮೀನನ್ನು ಉಳುವುದಕ್ಕೆ ಬೇಕಾದ ಎತ್ತುಗಳನ್ನು ತೆಗೆದುಕೊಳ್ಳಲು ಸಹಾಯ ಮಾಡಿದ್ದರೆ ಹೆಚ್ಚು ಆಹಾರ ಉತ್ಪತ್ತಿಯಾಗಿ ದೇಶದಲ್ಲಿರುವ ಆಹಾರದ ಕೊರತೆ ನೀಗುತಿತ್ತು. ಇದೊಂದನ್ನು ಮಾಡಿಲ್ಲ. ನಾಲ್ಕು ಲಕ್ಷ ಎಕರೆ ಜಮೀನನ್ನು ಕೊಟ್ಟಿರುವಾಗ ವ್ಯವಸಾಯ ಮಾಡಲು ಅನಾನುಕೂಲವಿದ್ದರೆ ಅದನ್ನು ಪರಿಹಾರ ಮಾಡುವುದಕ್ಕೆ ಏನು ಮಾಡಿದ್ದೀರಿ, ಅವನು ಜಮೀನನ್ನು ಮಟ್ಟ ಮಾಡಬಲ್ಲನೇ ಅವನಲ್ಲಿ ಎತ್ತುಗಳಿವೆಯೇ, ಇತರ ವ್ಯವಸಾಯದ ಸಲಕರಣೆಗಳಿವೆಯೇ ಎಂದು ಯಾವುದನ್ನು ಯೋಚನೆ ಮಾಡದೆ ನಾಲ್ಕು ಲಕ್ಷ ಎಕರೆ ಜಮೀನನ್ನು ಕೊಟ್ಟಿದ್ದೇವೆಂದು ಸಮಾಧಾನ ಪಟ್ಟುಕೊಳ್ಳಬಹುದೇ ಹೊರತು ಮತ್ತೇನೂ ಇಲ್ಲ, ಈ ಜಮೀನನ್ನು ಪಡೆದಿರುವವರು ಅದರಲ್ಲಿ ವ್ಯವಸಾಯ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆ ಮಾಡಬೇಕು.

ಬಾವಿಗಳಿಗೆ ಮೂರು ಸಾವಿರ ರೂಪಾಯಿಗಳನ್ನು ಸಾಲವಾಗಿ ಐದು ನೂರು ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿಯೂ ಕೊಡುವ ವ್ಯವಸ್ಥೆ ಇದೆ. ಈಗ 15 ಸಾವಿರ ಬಾವಿಗಳಿವೆ ನಮ್ಮ ಮೈಸೂರು ರಾಜ್ಯದಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ಇದು ನಮ್ಮಲ್ಲಿ ಬಹಳ ಜನಪ್ರಿಯವಾಗಿದೆ. ಈ ಯೋಜನೆಯನ್ನು ಮುಂದೆಯೂ ಇಟ್ಟುಕೊಂಡರೆ ನೀರಿನ ಸೌಕರ್ಯವಿಲ್ಲದೆ ಇರುವ ಪ್ರದೇಶಗಳಲ್ಲಿ ಬಾವಿಗಳನ್ನು ತೆಗೆದು ವ್ಯವಸಾಯ ಮಾಡಿ, ತನ್ಮೂಲಕ ಆಹಾರ ಪದಾರ್ಥಗಳನ್ನು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ, ಈ ಯೋಜನೆಯನ್ನು ಮುಂದುವರಿಸಿ ಕೊಂಡು ಹೋಗಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಜಪಾನ್ ಮಾದರಿಯಲ್ಲಿ ಭತ್ತ ಬೆಳೆಯುವುದು ಎಂದು ಎಲ್ಲ ಕಡೆಯೂ ಪ್ರಚಾರ ಮಾಡಿದ್ದಾರೆ. ಇದು ಬಹಳ ಶ್ರೇಷ್ಠವಾದುದು.

ಇದಕ್ಕೆ ನನ್ನ ಒಂದು ಸಲಹೆಯೇನೆಂದರೆ—ಈ ದಿವಸ ಜಪಾನ್ ಮಾದರಿ ನಾಟಿ ಹಾಕಲು ಜನರಿಗೆ ಬಹಳ ತೊಂದರೆ ಇದೆ. ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕಾಗಿ ವ್ಯವಸಾಯದ ಇಲಾಖೆಯಲ್ಲಿ ಜನರಿಗೆ ಒಂದು ಟ್ರೈನಿಂಗನ್ನು ಈ ವಿಚಾರದಲ್ಲಿ ಕೊಟ್ಟು ಕಳುಹಿಸಿದರೆ ರೈತರಿಗೆ ಅನುಕೂಲವಾಗುತ್ತೆ. ಈ ದಿವಸ ಹಳ್ಳೀ ಜನರಿಗೆ ಈ ವಿಚಾರವಲ್ಲಿ ಸರಿಯಾದ ಶಿಕ್ಷಣ-ತರಪೇತು ಇರುವುದಿಲ್ಲ, ಅವರಿಗೆ ನಾಟಿ ಹಾಕುವುದಕ್ಕೆ ಬರುವುದಿಲ್ಲ. ಕೆಲಸ ನಿಧಾನವಾಗುತ್ತಿದೆ. ಈ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರದವರು ವ್ಯವಸಾಯದ ಇಲಾಖೆಯ ಮೂಲಕ ಜನಗಳಿಗೆ ಈ ವಿಚಾರದಲ್ಲಿ ಅಂದರೆ ನಾಟಿ ಹಾಕೋ ವಿಚಾರದಲ್ಲಿ ಒಂದು ಟ್ರೈನಿಂಗ್ ಕೊಡಬೇಕಾದ್ದು ಅಗತ್ಯವೆಂದು ಹೇಳುತ್ತೇನೆ. ಮೊದಲು ನಾವು ಎಕರೆಯೊಂದಕ್ಕೆ 40-50-60 ಸೇರಿನತನಕ ಹಗೆ ಹಾಕುತ್ತಿದ್ದೆವು. ಈಗ ಈ ಜಪಾನ್ ಮಾದರಿ ಕಲ್ಟಿವೇಷನ್ ಜಾರಿಗೆ ಬಂದ ಮೇಲೆ ಎಕರೆಯೊಂದಕ್ಕೆ 8-10 ಸೇರು ಹಗೆ ಹಾಕಿದರೆ ಸಾಕಾಗಿರುತ್ತೆ. ಮೊದಲಿನ ಪದ್ಧತಿಗೂ—ಈಗಿನ ಆಧುನಿಕ ಪದ್ಧತಿಗೂ ಬಹಳ ವ್ಯತ್ಯಾಸವಿದೆ.. ಇದರಿಂದ ಈ ದಿವಸ ರೈತರಿಗೆ ಲಕ್ಷಾಂತರ ರೂಪಾಯಿ ಉಳಿತಾಯವಾಯಿತು. ಆದ್ದರಿಂದ ಜಪಾನ್ ಮಾದರಿ ಕಲ್ಟಿವೇಷನ್ ಬಹಳ ಒಳ್ಳೆಯದು, ನಮ್ಮ ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಇದನ್ನು ಜನಗಳಿಗೆಲ್ಲ ಸರಿಯಾಗಿ ಪ್ರಚಾರ ಮಾಡಲು ಸರಿಯಾದ ಹಸ್ತಪತ್ರಿಕೆಗಳನ್ನು ದೇಶಾದ್ಯಂತ ಹೊರಡಿಸಿ ಜನರಿಗೆ ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಪಶು ಸಂಪತ್ತು ವಿಚಾರ ತೆಗೆದುಕೊಂಡರೆ ನಮ್ಮ ದೇಶಕ್ಕೆ ಇದು ಬಹಳ ಅತ್ಯವಶ್ಯ, ನಮ್ಮ ದೇಶದಲ್ಲಿ ಪಶುಗಳೇ ರೈತನ ಆಸ್ತಿ ಮತ್ತು ಸಂಪತ್ತು. ಈ ದಿವಸ ಸರ್ಕಾರದವರು ಗೋಮಾಳಗಳನ್ನೆಲ್ಲ ಬೇಸಾಯಕ್ಕೆ ಕೊಟ್ಟು ದನಗಳಿಗೆ ಮೇಯಲು ಅವಕಾಶವಿಲ್ಲದಂತೆ ಮಾಡಿದ್ದಾರೆ. ಇಷ್ಟು ದನಗಳಿಗೆ ಇಷ್ಟು ಹುಲ್ಲುಗಾವಲಿರಲೇಬೇಕೆಂಬ ನಿಯಮವನ್ನು ಸರ್ಕಾರದವರು ಆಚರಣೆಗೆ ತರಲೇಬೇಕು. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರಿಗೆ ಸರ್ಕಾರದವರು ಉತ್ತಮ ತಳಿ ಆಕಳುಗಳನ್ನು ಸರಬರಾಯಿ ಮಾಡಬೇಕು. ಹಳ್ಳಿಯಲ್ಲಿ ಹಾಲಿಗೆ ಈಗ ತುಂಬಾ ತೊಂದರೆಯಾಗಿದೆ. ಅಲ್ಲಿ ದೊರೆಯತಕ್ಕ ಅಷ್ಟಿಷ್ಟು ಹಾಲೇನಿದೆ, ಅದೆಲ್ಲಾ ಬಸ್ಸುಗಳಲ್ಲೂ-ರೈಲಿನಲ್ಲೂ ನಗರಗಳಿಗೂ-ಪಟ್ಟಣಗಳಿಗೂ ಬಂದುಬಿಡುತ್ತೆ ಈ ವಿಚಾರವೆಲ್ಲ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಮೇಲಾಗಿ ಇತ್ತೀಚೆಗೆ ಹಳ್ಳಿಗಳಲ್ಲಿ ಸಹ ಹೋಟಲುಗಳ ಸಂಖ್ಯೆ ಜಾಸ್ತಿ ಆಗುತ್ತಿದೆ. ಸರ್ಕಾರದವರು ಈ ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ತಲೆ ಎತ್ತುತ್ತಿರುವ ಹೋಟಲುಗಳನ್ನು ತಡೆಗಟ್ಟುತ್ತಾರೆಂದು ಒಂದು ವದಂತಿಯಿತ್ತು. ಆದರೆ ಈಗ ಈ ನಾನಾ ಕಾರಣಗಳಿಂದ ಹಳ್ಳಿಗಳಲ್ಲಿ ಮಕ್ಕಳ ಹಾಲಿಗೂ ಕೂಡ ಬಹಳ ತೊಂದರೆಯುಂಟಾಗಿವೆ. ಆದರೆ ನಮ್ಮಲ್ಲಿ ಇಂದಿಗೂ ನಾಟೀ ಜಾತಿಯ ಆಕಳುಗಳು ಮಾತ್ರ ಇರುತ್ತವೆ. ಈ ಹಸುಗಳೇನೋ ಒಳ್ಳೆಯ ಕರುಗಳನ್ನು ಕೊಡುತ್ತವೆ, ಆದರೆ ಹೆಚ್ಚು ಹಾಲನ್ನು ಕರೆಯುವುದಿಲ್ಲ. ಹಳ್ಳಿಗಳ ಕಡೆ ಇರುವ ಹಾಲಿನ ತೊಂದರೆಯನ್ನು ನಿವಾರಣೆ ಮಾಡಲು ಸರ್ಕಾರದವರು ಗ್ರಾಮಾಂತರ ಪ್ರದೇಶದ ಜನಗಳಿಗೆ ಹೆಚ್ಚು ಹಾಲನ್ನು ಕರೆಯತಕ್ಕ ಆಕಳುಗಳನ್ನು ಸರಬರಾಯಿ ಮಾಡಬೇಕೆಂದು ಹೇಳುತ್ತೇನೆ. ಇನ್ನು ದನಗಳಿಗೆ ಬರತಕ್ಕ ರೋಗಾದಿಗಳೆಂದರೆ ದೊಡ್ಡರೋಗ-ಚಪ್ಪೆರೋಗ ಕಾಲು ಜ್ವರ, ಬಾಯಿ ಜ್ವರ-ಈ ಕಾಯಿಲೆಗಳು ಬಹಳ ಭಯಂಕರವಾದವುಗಳು, ಇವುಗಳನ್ನು ತಡೆಗಟ್ಟಲು ಸರ್ಕಾರದವರು ಬಹಳ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗಿದೆ. ಈ ರೋಗಾದಿಗಳನ್ನು ತಡೆಗಟ್ಟಿದರೆ ರೈತರಿಗೆ ಆಗತಕ್ಕ ನಷ್ಟ ಕಡಮೆಯಾಗುತ್ತ ರೈತನಿಗೆ ಜಾನುವಾರಗಳೇ ದೊಡ್ಡ ಸಂಪತ್ತು, ಈ ರೋಗಾದಿಗಳನ್ನು ತಡೆಗಟ್ಟಲು ಸರ್ಕಾರದವರು ಕೂಡಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಂಬಿದ್ದೇನೆ. ಸರ್ಕಾರದವರ, ಕೇವಲ ದೊಡ್ಡ ದೊಡ್ಡ ನಗರಗಳಲ್ಲಿ ಮಾತ್ರ ಹಾಲಿನ ಸರಬರಾಯಿಗಾಗಿ ಡೈರಿ ಫಾರಂಗಳನು ತೆರೆಯುತ್ತಿದ್ದಾರೆ. ಈ ಯೋಜನೆಯನ್ನು ತಾಲ್ಲೂಕು ಮತ್ತು ಹೋಬಳಿ ಪಟ್ಟದಲ್ಲೂ ಸಹ ಜಾರಿಗೆ ತರಬೇಕೆಂದು ಹೇಳುತ್ತೇನೆ. ಈ ಡೈರಿ ಫಾರಂಗಳನ್ನು ತೆರೆಯಲು ಖಾಸಗೀ ಜನಗಳ್ಯಾರಾದರೂ ಮುಂದೆ ಬಂದಲ್ಲಿ ಸರ್ಕಾರದವರು ಅವರಿಗೆ ತಕ್ಕ ಪ್ರೋತ್ಸಾಹ ನೀಡಬೇಕೆಂದು ಹೇಳುತ್ತೇನೆ. ನಮ್ಮ ಪಾಂಡವಪುರ ತಾಲ್ಲೂಕಿನಲ್ಲಿ ಒಂದು ಡೈರಿ ಫಾರಂನ್ನು ತೆರೆಯಬೇಕೆಂಬ ಆಸೆ ನನಗಿದೆ. ಸರ್ಕಾರದವರು ಪ್ರೋತ್ಸಾಹ ಕೊಡುವುದಾದರೆ ಅಲ್ಲಿ ಒಂದು ದೊಡ್ಡ ಹಾಲಿನ ಕೇಂದ್ರವನ್ನು ತೆರೆಯಬೇಕೆಂಬ ಆಸೆ ನನಗೆ ಬಹಳವಾಗಿದೆ. ಹಳ್ಳಿಗಳಲ್ಲಿ ಒಳ್ಳೆ ತಳಿಗಳ ಅಭಿವೃದ್ಧಿಗಾಗಿ ಹೆಚ್ಚು ಇನ್‌ಸೆಮಿನೇಷನ್ ಸೆಂಟರುಗಳನ್ನು ತೆರೆಯಬೇಕೆಂದು ಹೇಳುತ್ತೇನೆ.

ಇನ್ನು ರೂರಲ್ ಡೆವಲಪ್‌ಮೆಂಟ್ ವಿಚಾರಕ್ಕೆ ಬಂದರೆ:—ಈ ಬಾಬಿಗೆ ಈಗ ಒದಗಿಸಿರತಕ್ಕ ದುಡ್ಡು ಬಹಳ ಕಡಮೆ ಆಯಿತು. ಈಗ ಒದಗಿಸಿರುವ ರೂ. 1,43,54,000, ಬಹಳ ಕಡಿಮೆ ಆಯಿತು. ಗ್ರಾಮಾಂತರ ಪ್ರದೇಶಗಳಲ್ಲಿ ಮನೆ ಮಠಗಳಿಲ್ಲದೆ ಬಡ ಜನರು ಲಕ್ಷೋಪಲಕ್ಷವಾಗಿದ್ದಾರೆ. ನಮ್ಮದು ವೆಲ್-ಫೇರ್ ಸ್ಟೇಟ್ ಎಂತ ಹೇಳಲಾಗುತ್ತಿದೆ. ಆದರೆ ಈಗ ಕೇವಲ ಆ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಲಾಸ್ಸಿನ ಜನಗಳಿಗೆ ಮಾತ್ರ ಮನೆಗಳನ್ನು ಕಟ್ಟಿಸಿಕೊಡಲಾಗುತ್ತಿದೆ. ಅವರಿಗೆ ಕಟ್ಟಿಸಿಕೊಡತಕ್ಕದ್ದೇನೋ ಸರಿಯೇ, ಆದರೆ ಇವರ ಹಾಗೇ ಕಡು ಬಡವರಾಗಿರತಕ್ಕವರು-ಇವರಿಗಿಂತಲೂ ನಿರ್ಗತಿಕರಾಗಿರುವಂಥ ಜನ ಎಷ್ಟೋ ಲಕ್ಷ ಇದ್ದಾರೆ. ಇವರಿಗೆ ಮನೆಯೂ ಇಲ್ಲ ಮಠವೂ ಇಲ್ಲ; ಜಮೀನು ಮೊದಲೇ ಇಲ್ಲ, ಇಂಥ ಜನಗಳು ನಮ್ಮ ರಾಜ್ಯದಲ್ಲಿ ಎಷ್ಟಿದ್ದಾರೆಂಬುದನ್ನು ಸರ್ವೆ ಮಾಡಿಸಿ ಇವರೆಲ್ಲರಿಗೂ ವಸತಿ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹಳ್ಳಿಯ ಜನರಿಗೆ ಯಾವ ಅಂಥ ದೊಡ್ಡ ಅನುಕೂಲತೆಗಳನ್ನು ಒದಗಿಸದಿದ್ದರೂ

(ಶ್ರೀ ಬಿ. ಚಾಮಯ್ಯ)

ಹೋಗಲು ಅವರಿಗೆ ಕುಡಿಯುವ ನೀರನ್ನಾದರೂ ಒದಗಿಸುವುದು ಬೇಡವೇ? ಸರ್ಕಾರದವರೇನೋ ಆ ದಿವಸ ಹೇಳಿದರೂ 6,200 ಬಾವಿಗಳನ್ನು ತೆಗೆಸಲಾಗುತ್ತೆ; ಈ ಪೈಕಿ 2,200 ಬಾವಿಗಳಾಗಲೇ ಮುಗಿಯುವ ಸ್ಟೇಜಿಗೆ ಬಂದಿವೆ ಎಂತ. ಆದರೆ ಇನ್ನುಳಿದ ಬಾವಿಗಳೆಲ್ಲ ಯಾವಾಗ ಆಗುವುದು? ಸರ್ಕಾರದವರು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮುಗಿಸುತ್ತೇವೆಂದು ಹೇಳಬಹುದು. ಪಟ್ಟಣಗಳಲ್ಲಿರತಕ್ಕವರೇ ಎಲ್ಲಾ ವೈಭವಗಳನ್ನೂ ಅನುಭವಿಸುತ್ತಿರುವಾಗ ಹಳ್ಳಿಯ ಜನರಿಗೆ ಕುಡಿಯುವ ನೀರಿನ ಸೌಕರ್ಯವಾದರೂ ಇರಬೇಡವೇ? ಹೀಗೆ ಹಳ್ಳೀ ಜನರಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಸೌಕರ್ಯ ಸಹ ಇಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ಮಂತ್ರಿಗಳಿಗೆ ಈ ವಿಚಾರಗಳೆಲ್ಲಾ ಚನ್ನಾಗಿ ಗೊತ್ತಿದೆ.

ಒಬ್ಬ ಮಾನ್ಯ ಸದಸ್ಯರು.—ಏನು ಮಾನ್ಯ ಸದಸ್ಯರು ಪ್ರತಿಯೊಂದಕ್ಕೂ ಶ್ರೀ ರಾಚಯ್ಯನವರ ಹೆಸರನ್ನೇ ಹೇಳುತ್ತಿದ್ದರಲ್ಲ?

ಶ್ರೀ ಬಿ. ಚಾಮಯ್ಯ.—ಏನು ಮಾಡಲಿ? ನನಗೆ ಮುಖ್ಯಮಂತ್ರಿಗಳ ಸ್ಥಳ ಯಾವುದೋ ಗೊತ್ತಿಲ್ಲ, ಅವರು ನಮಗೆ ಅವರ ಊರನ್ನು ತೋರೇ ಇಲ್ಲ.

ಶ್ರೀ ಬಿ. ಡಿ. ಜತ್ತಿ (ಮುಖ್ಯ ಮಂತ್ರಿ) ಮುಂದೆ ಅಸೆಂಬ್ಲಿಯನ್ನು ಜಮಖಂಡಿಯಲ್ಲೇ ಕರೆಯೋಣ! ಎಲ್ಲಾ ಕಡೆ ಅವ್ಯವಸ್ಥೆಯಾಗಿದೆ. ನಮ್ಮ ತಾಲ್ಲೂಕಿನಲ್ಲಿ ಬಿ. ಡಿ. ಓ. ಸೋಷಿಯಲ್ ವೆಲ್‌ಫೇರ್ ಆಫೀಸರ ಎಂದು ಏನು ಇದ್ದಾರೆಯೋ ಅವರು ಯಾವಾಗಲೂ ತಮ್ಮ ಜೊತೆಯಲ್ಲಿಯೇ ಜೀಪ್‌ನಲ್ಲಿ ಲೇಡಿ ಆರ್ಗನೈಜರ್ ಅವರನ್ನು ಕರೆದುಕೊಂಡು ಹೋಗುತ್ತಾರೆ. ಇವನ್ನು ಅನೇಕ ಸಾರಿ ಮಂತ್ರಿಗಳಿಗೆ ಹೇಳಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಹೇಳುವುದನ್ನು ನಾನು object ಮಾಡುತ್ತೇನೆ. ಅವರು ಈ ರೀತಿ ಹೇಳುವುದನ್ನು ವಾಪಸ್ ತೆಗೆದುಕೊಳ್ಳಬೇಕು, ಸಾಮಾನ್ಯವಾಗಿ BDO ಜೊತೆಯಲ್ಲಿ Lady Organizer ಕೆಲಸ ಮಾಡಬೇಕಾಗುತ್ತದೆ, ಕೆಲವರು ಒಳ್ಳೆಯವರು ಆಗಿರಬಹುದು, ಕೆಟ್ಟವರು ಆಗಿರಬಹುದು, ಅವರು ಹೆಣ್ಣು ಮಕ್ಕಳು ಆಗಿರುವದರಿಂದ ಸಂರಕ್ಷಣೆ ಕೊಡುವುದಕ್ಕೆ ಹೀಗೆ ಮಾಡಬೇಕಾಗುತ್ತದೆ, ಇದನ್ನು ಹೆಣ್ಣು ಮಕ್ಕಳ ಪರವಾಗಿ ನಾನು ಹೇಳುತ್ತಿದ್ದೇವೆ, ಅವರು ತಮ್ಮ ಮಾತುಗಳನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು BDO ಜೊತೆಯಲ್ಲಿ ಕೆಲಸ ಮಾಡುತ್ತಾರೆ, ಇದರಲ್ಲಿ mischies attribufe ಏತಕ್ಕೆ ಮಾಡುತ್ತೀರಿ?

ಶ್ರೀ ಬಿ. ಚಾಮಯ್ಯ.—ಮುಖ್ಯವಾಗಿ ಹೇಳುವುದೇನೆಂದರೆ jeep misuse ಆಗುತ್ತಿದೆ. ಸ್ವಂತ ಕೆಲಸಕ್ಕಾಗಿ ಸಿನೀಮಾ ನಾಟಕ ನೋಡುವುದಕ್ಕೆ ಹೋಗಲು ಜೀಪ್ ಉಪಯೋಗಿಸುತ್ತಾರೆ, ಒಂದು ತಿಂಗಳಿಗೆ 300–400 ರೂಪಾಯಿ ಪೆಟ್ರೋಲ್ ಖರ್ಚಾಗುತ್ತದೆ. ಈ ರೀತಿ misuse ಆಗಬಾರದು, NESನಲ್ಲಿ ಬಾವಿಯ ಕೆಲಸ ಸರಿಯಾಗಿ ನಡೆಯುತ್ತಿಲ್ಲ. ಅದರ ಬಗ್ಗೆ ದುಡ್ಡು ಪಾವತಿಯಾಗುತ್ತಿಲ್ಲ, ಸರಕಾರದ ಆಡಳಿತೆಯಲ್ಲಿ ಸಡಿಲು ಉಂಟಾಗಿದೆ. ಯಾವ ಲೆಕ್ಕದ ವಿವರ ದೊರೆಯುವುದಿಲ್ಲ, ಆದರೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತಿದೆ. ಇಷ್ಟು ಹಣ ಖರ್ಚಾಗುವುದರಿಂದ ಜನರಿಗೆ ಉಪಯೋಗವಾಗುತ್ತಿದೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಿ ನೋಡಬೇಕು, N.E.S.ಗಳಲ್ಲಿ compost pit ಮಾಡಿಸುವುದು, ರಸ್ತೆ ರಚನೆ ಮಾಡುವುದು, ಇಲ್ಲ, ಮಾತುಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದೆ. ಈ ರೀತಿ ಇರುವ ಅವ್ಯವಸ್ಥೆಯನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕಾದುದು ಅಗತ್ಯ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಅಲೂರ್ ಹನುಮಂತಪ್ಪ (ನೆಲಮಂಗಲ).—ಅಧ್ಯಕ್ಷರೇ, ಈ ಸಭೆಯಲ್ಲಿ ಅನೇಕ ಸದಸ್ಯರು ಮಾತನಾಡಿ ರಾಜ್ಯಪಾಲರ ಭಾಷಣದ ಬಗ್ಗೆ ಡಿಮ್ಯಾಂಡುಗಳ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಮುಖ್ಯವಾಗಿ ಈ ವರ್ಷದ ಬಜೆಟ್ಟಿನಲ್ಲಿ ವ್ಯವಸಾಯ ಇಲಾಖೆಗೆ, ರೈತನ ಏಳಿಗೆಗೆ ಒದಗಿಸಿದ ಹಣ ಬಹಳ ಕಡಿಮೆಯಾಗಿದೆ. ಪ್ರತಿಯೊಂದು ಪಾಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯ ಇಲಾಖೆಗೆ ಹಾಗೂ ವ್ಯವಸಾಯ ಪ್ರಗತಿಗೆ ಸಾಕಷ್ಟು ಹಣ ಮೀಸಲಾಗಿ ಇಟ್ಟಿದ್ದಾರೆ ಎಂಬುದು ಸಂತೋಷ ಪಡತಕ್ಕ ವಿಷಯ, ಆದರೆ ವ್ಯವಸಾಯ ಏಳಿಗೆಗೆ ಒದಗಿಸಿದ ಹಣ ಬಹಳ ಕಡಿಮೆಯಾಗಿದೆಂದು ಅನ್ನಿಸುತ್ತದೆ ಈ ಸಂದರ್ಭದಲ್ಲಿ ರಚನಾತ್ಮಕ ಸಲಹೆ ಸೂಚನೆಗಳು ಬೇಕಾಗಿವೆ. ನನಗೆ ತೋಚಿದ ನಾಲ್ಕು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮತ್ತು ನನ್ನ ಸಲಹೆ ಸೂಚನೆಗಳನ್ನು ಸರ್ಕಾರದ ಗಮನಕ್ಕೆ ಮಂತ್ರಿಗಳ ಗಮನಕ್ಕೆ ಮತ್ತು ಈ ಸಭೆಯ ಗಮನಕ್ಕೆ ತರಲುಇಚ್ಛೆಪಡುತ್ತೇನೆ.

ಇವತ್ತಿನ ದಿವಸ ದೇಶದಲ್ಲಿ ಆಹಾರ ಅಭಾವ ಉಂಟಾಗಿದೆ ಹಳ್ಳಿಗಳ ಪರಿಸ್ಥಿತಿ ದಿನೇ ದಿನೇ ಚಿಂತಾಜನಕವಾಗಿದೆ, ದೇಶದಲ್ಲ ಜನಸಂಖ್ಯೆ ಜಾಸ್ತಿಯಾಗುತ್ತಿದೆ, ಹಳ್ಳಿಗಳಲ್ಲಿ ದೊಡ್ಡ ದೊಡ್ಡ ಕುಟುಂಬಗಳು ಒಡೆದು ಹೋಗುತ್ತಿವೆ, ವ್ಯವಸಾಯದ ಪ್ರಗತಿಯು ಕಡೆಗೆ ಸರಿಯಾಗಿ ಗಮನ ಕೊಡುತ್ತಿಲ್ಲ, ರೈತರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆಯಾಗುತ್ತಿಲ್ಲ, ಆದರೂ ಸಹ ಕಳೆದ ಹದಿಮೂರು ವರ್ಷಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ, ಬೇರೆ ಯಾವ ದೇಶವೂ ಸಾಧಿಸದೇ ಇದ್ದ ಕೆಲಸವನ್ನು ನಮ್ಮ ಸರ್ಕಾರ ಸಾಧನೆ ಮಾಡಿದ್ದಾರೆ. ಆಡಳಿತಮಾತ್ರ ಸರಿಯಾಗಿ ಕೆಲಸ ಮಾಡಿದರೆ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತದೆ, ಒಂದು ಗ್ರಾಮವನ್ನು ಒಂದು ಫ್ಯಾಕ್ಟರಿಗೆ ಹೋಲಿಸಿ ನೋಡಿದರೆ, ಒಂದು ಮನೆ ಒಂದು ಯೂನಿಟ್ ಆಗುತ್ತದೆ. ಪ್ರತಿಯೊಂದು ಯೂನಿಟ್ಟು ಸರಿಯಾಗಿ ಕೆಲಸ ಮಾಡಿದರೆ ಒಟ್ಟಿನಲ್ಲಿ ಪ್ರಗತಿ ಕಂಡುಬರುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ವ್ಯವಸಾಯ ಇಲಾಖೆಗೆ ಒದಗಿಸಿರತಕ್ಕಂಥ ಮೊತ್ತ ಬಹಳ ಕಡಿಮೆಯಾಗಿದೆ. ಇನ್ನೂ ಹೆಚ್ಚಿಗೆ ಒದಗಿಸಬೇಕಾಗಿತ್ತು, ವ್ಯವಸಾಯ ಇಲಾಖೆಯ ಬಗ್ಗೆ ಮಾತನಾಡಿದ ಶ್ರೀ ರೇವಣಸಿದ್ದಪ್ಪನವರ ಭಾಷಣವನ್ನು ಸಾವಧಾನವಾಗಿ ಕೇಳುತ್ತಿದ್ದೇನು, ಸಂಬಂಧ ಪಡದೇ ಇರತಕ್ಕಂಥ ಅನೇಕ ವಿಷಯಗಳನ್ನು ಅವರು ಹೇಳಿದ್ದಾರೆ.

ಈ ವ್ಯವಸಾಯದ ಇಲಾಖೆಯಲ್ಲಿ ಎರಡು ಕೋಟಿ ಐವತ್ತೈದು ಲಕ್ಷ ರೂಪಾಯಿಗಳಷ್ಟು ಹಣವನ್ನು ಒದಗಿಸಿರುವದಕ್ಕೆ ತಕ್ಕಂತೆ ಆಹಾರದ ಉತ್ಪತ್ತಿಯಾಗಬೇಕಾಗಿದ್ದರೆ ನಾವು ಬೆಳೆಯತಕ್ಕ ಕ್ರಮಗಳನ್ನು ಬದಲಾವಣೆ ಮಾಡಿ, ಕಾಯಿಲೆಗಳನ್ನು ಬರುವುದನ್ನು ತಪ್ಪಿಸುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದ್ದರೆ ಈಗ ನೂರಕ್ಕೆ ಇಪ್ಪತ್ತೈದು ಭಾಗದಷ್ಟು ಹೆಚ್ಚಾಗಿ ಆಹಾರದ ಉತ್ಪತ್ತಿ ಬರುತ್ತಿತ್ತೋ ಏನೋ ಎಂದು ನನಗನಿಸುತ್ತದೆ. ಇಷ್ಟೊಂದು ಪ್ರಾಧಾನ್ಯತೆ ಇದಕ್ಕೆ ದೊರೆಯುತ್ತಿಲ್ಲ. ಇದೊಂದು ದೊಡ್ಡದಾದ ಕೊರತೆ. ಮತ್ತು ಈ ಇಲಾಖೆಯಲ್ಲಿ ಪ್ರಚಾರ ಕಾರ್ಯಕ್ರಮದ ನ್ಯೂನತೆಗಳು ಇವೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಈ ಇಲಾಖೆಗೆ ಇನ್ನೂ 20 ಕೋಟಿ ರೂಪಾಯಿಗಳಷ್ಟನ್ನು ಒದಗಿಸಿದರೂ ಸಹ ಅದರಿಂದ ಉಪಯೋಗವಾಗುತ್ತಿತ್ತು. ಆದುದರಿಂದ ಈ ಬಾಬಿಗಾಗಿ ಇನ್ನೂ ಹೆಚ್ಚಿನ ಮೊತ್ತವನ್ನು ಒದಗಿಸಿಕೊಳ್ಳುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಮುಖ್ಯವಾಗಿ ಹಳ್ಳಿಗಾಡಿನ ಪ್ರತಿಯೊಂದು ಕುಟುಂಬಕ್ಕೂ ಅನುಕೂಲವಾಗುವ ಹಾಗೆ ಮಾಡಬೇಕು. ಇನ್ನು ಜಮೀನನ್ನು ಯಾವ ರೀತಿಯಾಗಿ ಇಡಬೇಕು, ಭೂಗುಣ ಹೇಗಿದೆ, ಇದಕ್ಕಾಗಿ ಕೃತಕ ಗೊಬ್ಬರಗಳನ್ನು ಒದಗಿಸುವ ಕೆಲಸವನ್ನು ಈ ಇಲಾಖೆಯವರು ಮಾಡಬೇಕು ಆಧುನಿಕ ವ್ಯವಸಾಯದ ಕಾರ್ಯಕ್ರಮವನ್ನು ಹಳ್ಳಿಗಾಡಿನಲ್ಲಿರುವ ಪ್ರತಿಯೊಂದು ಕುಟುಂಬಕ್ಕೂ ತಿಳಿಯುವಂತೆ ಪ್ರಚಾರ ಮಾಡಬೇಕು. ಹೀಗೆ ಪ್ರತಿಯೊಂದು ವಿಚಾರದಲ್ಲಿಯೂ ಹೆಚ್ಚಿನ ಶ್ರದ್ಧೆ ವಹಿಸಿದರೆ ಅನುಕೂಲವಾಗುತ್ತದೆ. ಅಲ್ಲದೆ ಈ ಇಲಾಖೆಯವರು ಈಗಿರುವುದಕ್ಕಿಂತ ಇನ್ನೂ ನಾಲ್ಕರಷ್ಟು ಅಥವಾ ಹತ್ತರಷ್ಟು ಬೆಳೆಯನ್ನು ಹೆಚ್ಚಾಗಿ ಬೆಳೆಯಲು

(ಶ್ರೀ ಅಲೂರು ಹನುಮಂತಪ್ಪ)

ಶ್ರಮಿಸಬೇಕು. ಒಂದೊಂದು ಕಡೆಯಲ್ಲಿಯೂ ಫೀಲ್ಡ್‌ಮನ್ನುಗಳಿರುತ್ತಾರೆ. ಇವರುಗಳ ಸಹಾಯದಿಂದ ವ್ಯವಸಾಯದ ಕ್ರಮದಲ್ಲಿ ಆಧುನಿಕ ವ್ಯವಸಾಯದ ಪದ್ಧತಿಯನ್ನು ಅನುಸರಿಸಿ ಹೆಚ್ಚಿನ ಬೆಳೆಯನ್ನು ಬೆಳೆಯಬಹುದು. ಅವರು ಹಳ್ಳಿಗಾಡಿನಲ್ಲಿ ನಿರುದ್ಯೋಗಿಗಳಾಗಿರುವವರನ್ನು ಈ ಫೀಲ್ಡ್‌ಮನ್ನುಗಳೇ ವಿದ್ಯಾವಂತರನ್ನಾಗಿ ಮಾಡಲು ತಕ್ಕಷ್ಟು ತರಬೇತಿಯನ್ನು ಕೊಡಲು ಆಯಾ ತಾಲ್ಲೂಕುಗಳಲ್ಲಿ ಟ್ರೇನಿಂಗು ಸೆಂಟರುಗಳನ್ನು ತೆರೆದು ಇಂತಹವರಿಗೆ ಟ್ರೇನಿಂಗನ್ನು ಕೊಡಬೇಕಾಗುತ್ತದೆ. ಹಿಂದೆ ಒಂದು ಪ್ರಶ್ನೆಯನ್ನು ಹಾಕಿದ ಸಂದರ್ಭದಲ್ಲಿ ವ್ಯವಸಾಯದ ಸ್ಕೂಲುಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ತೆರೆಯಬೇಕು ಎಂದು ಕೆಲವರು ಹೇಳಿದರು. ಆದರೆ ಈ ಸ್ಕೂಲುಗಳನ್ನು ತೆರೆದರೆ ವರ್ಷಾನುಗಟ್ಟಲೆ ಹಳ್ಳಿಗಾಡಿನವರಿಗೆ ಕೆಲಸವಿರುವುದಿಲ್ಲ. ಸಾಮಾನ್ಯವಾಗಿ ಇಲಾಖೆಯಲ್ಲಿರುವ ತಜ್ಞರನ್ನು ಆಯಾ ಗ್ರಾಮಪಂಚಾಯಿತಿಗಳವರಿಗೆ ವಹಿಸಿ, ಗ್ರಾಮಪಂಚಾಯಿತಿಗಳ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿ ಹಾಗೂ ಉತ್ತಮವಾದ ಬೀಜಗಳನ್ನು ಒದಗಿಸುವುದು ಸರಿಯಾಗಿ ಜಮೀನನ್ನು ಆಬಾದು ಮಾಡಲು ಸೂಕ್ತವಾದ ಸಲಹೆಗಳನ್ನು ಕೊಡುವುದು. ಮತ್ತು ಉತ್ತಮವಾದ ಬೆಳೆಯನ್ನು ಬೆಳೆಯುವುದು, ಇವನ್ನೆಲ್ಲಾ ಹೇಳಿಕೊಡುವುದು ಬಹಳ ಪ್ರಾಮುಖ್ಯವಾದುದು.

ಸ್ವಾಮೀ, ಇವತ್ತಿನ ದಿವಸ ಬರೀ ವ್ಯವಸಾಯದ ಉತ್ಪತ್ತಿಯಿಂದಲೇ ರೈತನ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಂತಿಲ್ಲ. ರೈತನ ಸ್ಥಿತಿಯನ್ನು ಸುಧಾರಿಸಬೇಕಾದರೆ ಆತನ ಕಷ್ಟಗಳೇನು ಅವುಗಳನ್ನು ತಿಳಿದುಕೊಂಡು ಅವನಿಗೆ ತಕ್ಕಷ್ಟು ಸಹಾಯಗಳನ್ನು ಒದಗಿಸಿಕೊಡಬೇಕು. ಈಗ ಅವನ ಸ್ಥಿತಿ ಹಾಗೆಯೇ ಇದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಪ್ರತಿಯೊಂದು ಕುಟುಂಬಕ್ಕೂ ಅನುಕೂಲವಾಗುವ ರೀತಿಯಲ್ಲಿ ಸಾಕಷ್ಟು ಉತ್ತೇಜನ ಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ ಹಾಗೂ ಹಳ್ಳಿಗಾಡಿನವರಿಗೆ ಹಣ್ಣುಗಳ ಗಿಡಗಳನ್ನು ಸರಬರಾಜು ಮಾಡಿಕೊಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ತಾವೇ ಹೇಳುತ್ತೀರಾ, ಆಹಾರದ ಅಭಾವವನ್ನು ಹೋಗಲಾಡಿಸುವುದಕ್ಕಾಗಿ ಕೆಲಕೆಲವು ಪದಾರ್ಥಗಳನ್ನು ಸರಬರಾಜು ಮಾಡುವುದು ಅಷ್ಟೇ ಮುಖ್ಯವಾದುದು. ಭತ್ತ, ರಾಗಿ ಇವುಗಳ ಜೊತೆಗೆ, ದರ ಅರ್ಧದಷ್ಟು ಹಣ್ಣುಗಳನ್ನು, ಹಾಲಿನ ಉತ್ಪಾದನೆಯನ್ನೂ ಮಾಡಿದರೆ ದೇಶದ ರೈತರ ಮಕ್ಕಳಿಗೆ ಪುಷ್ಟಿಕರವಾದ ಆಹಾರ ದೊರಕಿದಂತಾಗುತ್ತದೆ ಎಂದು ಹೇಳುತ್ತಾರೆ. ಇದನ್ನು ಕಾರ್ಯಗತವಾಗುವ ಹಾಗೆ ಮಾಡಬೇಕು. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳಷ್ಟು ಬೇಕಾದರೂ ಖರ್ಚು ಮಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಈಗ ಬರುತ್ತಿರುವಂತಹ ಹಾಲಿನ ಡೈರಿ ಕೇಂದ್ರವನ್ನು ಇನ್ನೂ ತ್ವರಿತವಾಗಿ ಮಾಡಬೇಕು. ಇಲ್ಲಿಗೆ ಒಳ್ಳೆಯ ತಳಿಗಳನ್ನು, ತುಮಕೂರು, ಕೋಲಾರ ಮತ್ತು ಇನ್ನಿತರ ಜಿಲ್ಲೆಗಳಿಂದ ತರಿಸಿಕೊಂಡು ಪ್ರತಿಯೊಂದು ಕುಟುಂಬಕ್ಕೂ ಬೇಕಾಗುವಷ್ಟು ಹಾಲನ್ನು ಕೊಡಿ. ಸ್ಮಾಲ್ ಸೇವಿಂಗ್ಸನ್ನು ಪ್ರಚಾರ ಮಾಡಿ ಅದನ್ನು ಹರಡುವುದಕ್ಕಾಗಿ ಹಿಂದೆ ನಾನೂ ಸಹ ಹೋಗಿದ್ದೆ. ಆ ಸ್ಮಾಲ್ ಸೇವಿಂಗ್ಸ್ ಹೇಗೆ ಆಗಬೇಕಾಗಿತ್ತು ಎಂದರೆ, To give a family a milk cow and buffalow so that the house lady can then save something out of it. ಈ ಸ್ಮಾಲ್ ಸೇವಿಂಗ್ಸ್ ಎನ್ನುವುದು ಹೇಗೆ ನಮಗೆ ಬರುತ್ತದೆ ಎಂದರೆ ಪ್ರತಿಯೊಂದು ಕುಟುಂಬಕ್ಕೂ ಒಂದು ಒಳ್ಳೆಯ ಉತ್ತಮವಾದ ತಳಿಯ ಹಸು ಮತ್ತು ಎಮ್ಮೆಯನ್ನು ಕೊಟ್ಟು ಉತ್ಪಾದನೆಯನ್ನು ಹೆಚ್ಚು ಮಾಡಲು ಸಹಾಯ ಮಾಡಬೇಕು. ಯಾವ ಯೋಜನೆಯನ್ನೇ ಮಾಡಲಿ ಅದಕ್ಕೆ ತಕ್ಕ ಸಹಾಯವನ್ನು ಆಯಾ ಇಲಾಖೆಯವರು ಒದಗಿಸುವುದು ಒಂದು ದೊಡ್ಡ ಜವಾಬ್ದಾರಿ. ಹಾಗೆ ಆಗಿಂದಾಗ್ಗೆ ಅತಿ ತ್ವರಿತವಾಗಿ ಕೊಡತಕ್ಕ ಇಲಾಖೆಯ ಮೂಲಕ ಕೊಡತಕ್ಕ ಅಲ್ಪಾವಧಿ ಸಾಲ, ಮಧ್ಯವರ್ತಿ ಸಾಲದ ರೂಪದಲ್ಲಿ ರೈತನಿಗೆ ಬೇಕಾಗುವ ಹಣವನ್ನೂ ಮತ್ತು ಎಮ್ಮೆಯನ್ನೂ ಸಾಲದ ರೂಪದಲ್ಲಿ ಕೊಡುವುದಾದರೆ ಈ ಜನಕ್ಕೆ ಅನುಕೂಲವಾಗುತ್ತದೆ.

ಹಾಗೇ ಈ ಮೊದಲು ಹೇಳಿದ ಮೂರು ಜಿಲ್ಲೆಗಳ ಕುಂದುಕೊರತೆಗಳೇನು ಅವುಗಳನ್ನು ತಿಳಿದುಕೊಂಡು ಅವನ್ನು ನಿವಾರಣೆ ಮಾಡುವ ತಕ್ಕ ಕ್ರಮ ಕೈಗೊಂಡರೆ ಅನುಕೂಲವಾಗುತ್ತದೆ ಎಂದು ನನ್ನ ನಂಬಿಕೆ. ಮೈಸೂರು ದೇಶದ ವ್ಯವಸಾಯದ ಇಲಾಖೆಗೆ ಸಂಬಂಧಿಸಿದಂತೆ ಒಂದು ವ್ಯವಸಾಯದ ಸಂಘವಿದೆ. ಈ ಸಂಘವು ಬೆಂಗಳೂರಿನಲ್ಲಿದ್ದರೂ ಮೈಸೂರು ಸಂಸ್ಥಾನಕ್ಕೇ ಸೇರಿದ್ದು. ಇದರಂತೆ ಅನೇಕ ಯುವಕರ ಸಂಘಗಳೂ ಇವೆ. ಇದರ ಕರ್ತವ್ಯ ಬಹಳ ಒಳ್ಳೆಯದು. ದೇಶದಲ್ಲಿರುವ ರೈತರಿಗೆ ಆಗಿಂದಾಗ್ಗೆ ಸರಿಯಾದ ರೀತಿಯಲ್ಲಿ ಅವರ ವ್ಯವಸಾಯಾಭಿವೃದ್ಧಿಯಲ್ಲಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸಹಾಯ ಮಾಡುವುದಕ್ಕಾಗಿ ಈ ಸಂಘಗಳಿವೆ. ದೇಶದ ಮುಖ್ಯವಾದ ಮತ್ತು ಪ್ರಗತಿದಾಯಕವಾದ ಕೆಲಸ ಕಾರ್ಯಗಳಲ್ಲಿ ಕೆಲಸ ಮಾಡಿ ರೈತರನ್ನು ಹುರಿದುಂಬಿಸಬೇಕಾಗಿದ್ದರೆ ಇಂತಹ ವ್ಯವಸಾಯ ಸಂಘಗಳು ಶ್ರಮಿಸಬೇಕಾಗುತ್ತದೆ. ಇಂತಹ ವ್ಯವಸಾಯದ ಸಂಘಗಳಿಗಾಗಿ ತಾವು ಲಕ್ಷ ರೂಪಾಯಿಗಳಷ್ಟು ಒದಗಿಸಿಕೊಟ್ಟರೆ, ಆಗ ವ್ಯವಸಾಯದ ಧೋರಣೆ ಹಾಗೂ ವ್ಯವಸಾಯದ ಪ್ರಗತಿಗೆ ಮತ್ತು ಮಾಡತಕ್ಕ ಕೆಲಸಕಾರ್ಯಗಳಿಗೆ ಹೆಚ್ಚಿನ ಮನ್ನಣೆ ಕೊಟ್ಟಂತಾಗುತ್ತದೆ. ಈ ವ್ಯವಸಾಯದ ಸಂಘಕ್ಕೆ ಸೇರಿದ ಹಾಗೆ ಸುಮಾರು 20 ಮ್ಯೂಸಿಯಂಗಳನ್ನು ತೆರೆಯಬೇಕೆಂದು ಕೇಳುತ್ತಿದ್ದಾರೆ. ಬೆಂಗಳೂರಿನಲ್ಲಿ ಇಂತಹ ಒಂದು ವ್ಯವಸಾಯದ ಶಾಶ್ವತವಾದ ಮ್ಯೂಸಿಯಂನ್ನು ತಾವು ತೆರೆದರೆ ಬಹಳ ಅನುಕೂಲವಾಗುತ್ತದೆ. ರೈತರು ಹೊರಗಡೆ ಹೋಗಿ ನೋಡಿಕೊಂಡು ಬಂದು ತಿಳಿಯತಕ್ಕದ್ದಕ್ಕಿಂತ ಇಲ್ಲಿಯೇ ನೋಡಿಕೊಂಡು ವ್ಯವಸಾಯದ ಕ್ಷೇತ್ರದಲ್ಲಿ ಇನ್ನೂ ಅಭಿವೃದ್ಧಿಯನ್ನು ಸಾಧಿಸಬಹುದು ಮೊನ್ನೆ ತಾನೇ ಒಂದು ಎಕರೆಗೆ 52ರಿಂದ 53 ಪಲ್ಲದಷ್ಟು ಭತ್ತವನ್ನು ಬೆಳೆಯುದಕ್ಕಾಗಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಎಕರೆಗೆ 16-18 ಪಲ್ಲದಷ್ಟು ಬೆಳೆಯನ್ನು ಬೆಳೆಯುದಕ್ಕಾಗಿ ಬಹುಮಾನವನ್ನು ಪಡೆದವರನ್ನು ನೋಡಿದ್ದೇವೆ. ಸಾಮಾನ್ಯವಾಗಿ ಎಲ್ಲರೂ ಈ ರೀತಿಯಾಗಿ ಬೆಳೆ ಮಾಡಲು ಸಾಧ್ಯವಿಲ್ಲ. ಇದಕ್ಕೆ ಮುಖ್ಯವಾಗಿ ಹೆಚ್ಚಿನ ಒಂದು ಮುಂಜಾಗರೂಕತೆ ಬೇಕಾಗುತ್ತದೆ. ಇದಕ್ಕಾಗಿ ಹೆಚ್ಚಿನ ಶಕ್ತಿಯೂ ಬೇಕಾಗುತ್ತದೆ. ಹೀಗೆ ವ್ಯವಸಾಯದ ಕ್ಷೇತ್ರದಲ್ಲಿ ಹೆಚ್ಚಿನ ಬೆಳೆಯನ್ನು ಬೆಳೆಯಲು ನಮ್ಮ ದೇಶದ ರೈತರಿಗೆ ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿ ಅವರನ್ನು ಸುಧಾರಿಸುವುದು ಮುಖ್ಯ ಕರ್ತವ್ಯವಾಗಿದೆ. ಈ ಎರಡು ಇಲಾಖೆಗಳಿಗೋಸ್ಕರವಾಗಿ ಇನೂ ಎಷ್ಟು ಕೋಟಿ ರೂಪಾಯಿಗಳನ್ನು ಒದಗಿಸಿದರೂ ಸಹ ಖಂಡಿತ ಅದರಿಂದ ಫಲಪ್ರದವಾದ ಕೆಲಸವಾಗುತ್ತಿದೆಯೇ ವಿನಾ ಈ ಕ್ಷೇತ್ರದಲ್ಲಿ ಯಾವ ರೀತಿಯ ನಷ್ಟಗಳೇನೂ ಸರಕಾರಕ್ಕೆ ಇಲ್ಲ. ಆ ರೀತಿ ಅನುಮಾನಕ್ಕೆ ಅವಕಾಶವೇ ಇಲ್ಲ.

ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ವಿಚಾರದಲ್ಲಿ ಇಲ್ಲಿ ಬಹಳ ಟೀಕೆಗಳನ್ನು ಮಾಡಿದ್ದಾರೆ. ಅಧಿಕಾರಿಗಳಿಂದ ಒಂದು ರೀತಿಯ ಹಣ ದುರ್ವಿನಿಯೋಗವಾಗಿಲ್ಲ ಎಂದು ಹೇಳುವುದಕ್ಕೆ ಬದಲಾಗಿ ಆಗಿರತಕ್ಕ ತಪ್ಪುಗಳನ್ನು ತಿದ್ದುವುದು ಅಲ್ಲಿರುವ ಸ್ಥಳೀಯ ಮುಖಂಡರುಗಳಿಗೆ ಬಹು ಮುಖ್ಯವಾದುದು. ಅವರಿರುವ ಸ್ಥಳದಲ್ಲಿಯೇ ಆಗಿರುವ ತಪ್ಪುಗಳನ್ನು ತಿಳಿದುಕೊಂಡು ತಿದ್ದುವುದಕ್ಕೆ ಬದಲಾಗಿ ಇಲ್ಲಿಯವರೆಗೆ ಏಕೆ ಬಂದರು ಎಂದು ನನಗನಿಸುತ್ತಿದೆ. ಕೆಲವು ಆಡಳಿತದ ಲೋಪದೋಷಗಳು ಇರಬಹುದು. ಅದನ್ನು ಸರಿಯಾದ ರೀತಿಯಲ್ಲಿ ತಿದ್ದುವುದು ಈ ವ್ಯವಸ್ಥೆಗಳ ಜವಾಬ್ದಾರಿಯನ್ನು ಹೊತ್ತಿರುವವರದಾಗಿದೆ ಮತ್ತು ನಿಮ್ಮ ಜವಾಬ್ದಾರಿಯೂ ಇದೆ ಎಂದು ನಾನು ಭಾವಿಸುತ್ತೇನೆ. ನಮ್ಮ ಶ್ರೀಮಾನ್ ರಾಚಯ್ಯನವರಿಗೇನೋ ವ್ಯವಸಾಯದ ಇಲಾಖೆಯಲ್ಲಿ ಬಹಳವಾದ ಪ್ರಗತಿಯನ್ನು ಸಾಧನೆ ಮಾಡಬೇಕೆಂದು ಆಸೆಯಿದೆ. ಅದಕ್ಕೆ ಸರಿಯಾಗಿ ನಾವು ಹಿಂದಿನಿಂದಲೂ ಹೇಳುತ್ತಿರುವಂತೆ ನಮ್ಮ ಸರಕಾರದವರು ಇನ್ನೂ ಹತ್ತಾರು ಕೋಟಿ ರೂಪಾಯಿಗಳಷ್ಟು ಕೊಟ್ಟರೂ ಸಾಲದು. Developmentಗೆ ಇದು Mother of all Departments ಈ ಇಲಾಖೆಗೆ ಎಷ್ಟು ಹಣವನ್ನು ಒದಗಿಸಿದರೂ ರೈತರಿಗೆ ನೇರವಾಗಿ ಹೋಗುವ ಇಲಾಖೆ ಇದು.

(ಶ್ರೀ ಆಲೂರು ಹನುಮಂತಪ್ಪ)

1-00 P.M.

ಹೀಗಿರುವಾಗ, ವ್ಯವಸಾಯ ಪ್ರಗತಿಗೆ ತಾವು ಎಷ್ಟು ಹಣವನ್ನು ಖರ್ಚು ಮಾಡಿದರೂ ಅದು ನೇರವಾಗಿ ಪ್ರತಿಯೊಂದು ರೈತಕುಟುಂಬಕ್ಕೂ ಹೋಗುತ್ತಿದೆಯೋ, ಅದರಿಂದ ವ್ಯವಸಾಯಗಾರರು ಸೌಕರ್ಯ ಹೊಂದಿದ್ದಾರೆಯೋ ಎನ್ನುವುದನ್ನು ನೋಡಬೇಕು ರೈತಕುಟುಂಬದಲ್ಲಿ ಇವತ್ತು ಬೇರೆ ಬಜೆಟ್ ಇದೆಯೋ, ಸರ್‌ಪ್ಲಸ್ ಬಜೆಟ್ ಇದೆಯೋ, ಪ್ರತಿಯೊಂದು ಕುಟುಂಬದ ವರಮಾನ ಹೆಚ್ಚಿದೆಯೋ, ಇಲ್ಲವೇ, ಬೆಳೆದ ಬೆಳೆ ಸಾಕಾಗುತ್ತಿದೆಯೋ ಎನ್ನುವುದನ್ನು ನೋಡಬೇಕು. ಸಾಕಾಗದಿದ್ದರೆ ಈಗಿರತಕ್ಕ ಕುಟುಂಬ ಯೋಜನೆಗಳು ಮತ್ತು ಡೆವಲಪ್‌ಮೆಂಟ್ ಇಲಾಖೆಗಳು ಇನ್ನು ಚೆನ್ನಾಗಿ ಕೆಲಸಮಾಡಿ, ರೈತರ ಹಿತಸಾಧನೆಯನ್ನು ಗಳಿಸಬೇಕು. ಈ ಯೋಜನೆಗಳು ಚೆನ್ನಾಗಿ ಕೆಲಸಮಾಡಿದರೆ ಹಳ್ಳಿಗಳಲ್ಲಿರುವ ನಿರುದ್ಯೋಗವನ್ನು ಹೋಗಲಾಡಿಸಿ, ಅವರಿಗೆ ಕೆಲಸವನ್ನು ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಈಗ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚಿನ ಕೆಲಸ ಮಾಡಬೇಕೆಂಬ ಆಕಾಂಕ್ಷೆ ಹುಟ್ಟಿದೆ. ನಮ್ಮ ರೈತರಲ್ಲಿಯೂ ಸಹ ಪ್ರತಿಯೊಂದು ಗ್ರಾಮದ ನೈರ್ಮಲ್ಯವನ್ನು ಹೆಚ್ಚಿಸಬೇಕು, ಒಳ್ಳೆಯ ಸೌಕರ್ಯಗಳನ್ನು ಏರ್ಪಡಿಸಿಕೊಳ್ಳಲು ದುಡಿಯಬೇಕು ಎಂಬ ಮನೋಭಾವ ಮೂಡಿದೆ. ಇಷ್ಟಾದರೂ ವ್ಯವಸಾಯ ಪ್ರಗತಿಯಲ್ಲಿ ಮಾತ್ರ ಹಿಂದಿನ ಒಂದು ಕ್ರಮವನ್ನೇ ಅನುಸರಿಸಿಕೊಂಡು ಬರತಕ್ಕಂಥ ಪರಿಸ್ಥಿತಿ ಇದೆ. ಕಾರಣ ರೈತರ ಆರ್ಥಿಕ ಪರಿಸ್ಥಿತಿ. ಅವರಿಗೆ ಸರಿಯಾದ ಉಪಕರಣಗಳಿಲ್ಲ. ಹಾಗೂ ಅವರಿಗೆ ಸರಿಯಾದ ಉತ್ತಮವಾದ ಬೀಜಗಳನ್ನು ಸಪ್ಲೈ ಮಾಡಿಕೊಳ್ಳುವುದಕ್ಕೆ ಶಕ್ತಿ ಇಲ್ಲ. ಸೊಸೈಟಿಗಳ ಮುಖಾಂತರದಲ್ಲಿ ಸರಿಯಾದ ರೀತಿಯಲ್ಲಿ ಗೊಬ್ಬರವನ್ನು ಒದಗಿಸತಕ್ಕಂಥ, ಹಣವನ್ನು ಒದಗಿಸತಕ್ಕಂಥ ಏರ್ಪಾಡನ್ನು ಮಾಡುವುದು ವ್ಯವಸಾಯ ಇಲಾಖೆಯ ಬಹಳ ಮುಖ್ಯವಾದ ಕರ್ತವ್ಯ. ವ್ಯವಸಾಯಕ್ಕೆ ಬೇಕಾದಂತಹ ಇತರ ಉಪಕರಣಗಳನ್ನು ಒದಗಿಸತಕ್ಕಂಥಾದ್ದು ಬಹಳ ಮುಖ್ಯವಾದುದು. ಶ್ರೀಮಾನ್ ರಾಚಯ್ಯನವರು ಪ್ರಶ್ನೆಗಳಿಗೆ ಉತ್ತರಕೊಡುತ್ತಾ ನಮಗೆ ಇಷ್ಟು ಕಡಿಮೆ ಐರನ್ ಸಪ್ಲೈ ಆಗುತ್ತಿದೆಯೆಂದು ಹೇಳಿದ್ದು ಕೇಳಿ ನನಗಂತೂ ಬಹಳ ವ್ಯಥೆಯಾಯಿತು. ವ್ಯವಸಾಯಗಾರರಿಗೆ ಉಪಕರಣಗಳು ಸರಿಯಾಗಿ ದೊರೆಯದೆ ಇದ್ದರೆ ಅವರು ವ್ಯವಸಾಯ ಮಾಡುವುದು ತಾನೆ ಹೇಗೆ ಎನ್ನುವುದನ್ನು ರಾಚಯ್ಯನವರು ಯೋಚನೆಮಾಡಬೇಕು. ಕೃತಕ ಗೊಬ್ಬರಗಳನ್ನು ಒದಗಿಸುವಾಗ ಪ್ರತಿಯೊಂದು ತಾಲ್ಲೂಕಿನ ಭೂಲಕ್ಷಣದ ಚಾರ್ಟ್ ಪ್ರಕಾರ ಒದಗಿಸಬೇಕು. ಇವತ್ತು ಯಾವ ಊರಿಗೆ ಯಾವ ಗೊಬ್ಬರವನ್ನು ಹಾಕಬೇಕೆಂಬ ಒಂದು ಆಲೋಚನೆ ಹಳ್ಳಿಗಾರರಲ್ಲಿ ಇಲ್ಲದ ಕಾರಣ ಅನುಭವದಿಂದ ಹಾಕಲಿಕ್ಕೆ ಬಿಡುತ್ತಾರೆ. ಈ ಕಾಂಪೋಸ್ಟ್ ಗುಂಡಿಗಳ ವಿಚಾರ ಶ್ರೀ ನಾಗ ಚಾಮಯ್ಯನವರು ಹೇಳಿದರು. ಇದರಲ್ಲಿ ಸ್ವಲ್ಪ ರಾಷ್ಟ್ರೀಯ ವಿಸ್ತರಣಾ ಯೋಜನೆ ಅಧಿಕಾರಿಗಳ ಜೊತೆಗೆ ಹಳ್ಳಿಗಾಡಿನ ಮುಖಂಡರೂ ಸಹಕರಿಸಿದಂತೆ ಇನ್ನೂ ಉತ್ತಮ ಫಲಿತಾಂಶಗಳನ್ನು ಪಡೆಯಬಹುದು. ಜನರ ಮುಖಂಡರುಗಳು ಅವರ ಜೊತೆಗೆ ಹೋಗಬೇಕು. ದೇಶದ ಪ್ರಗತಿ ಬರೀ ಅಧಿಕಾರಿಗಳನ್ನೇ ಅವಲಂಬಿಸಿಲ್ಲ. ದೇಶದ ಪ್ರಗತಿ ಜವಾಬ್ದಾರಿ ಒಬ್ಬರ ಮೇಲೆಯೇ ಇಲ್ಲ ಬರೀ ಅಧಿಕಾರಿಗಳ ಮೇಲೆಯೇ ಇಲ್ಲ ಅಥವ ಸದಸ್ಯರುಗಳ ಮೇಲೆಯೂ ಇಲ್ಲ, ಪ್ರತಿಯೊಬ್ಬರ ಮೇಲೆಯೂ ಇದೆ. ಪ್ರತಿಯೊಬ್ಬರ ಕರ್ತವ್ಯವೂ ಸಹ ಅಗಾಧವಾಗಿದೆ. ಬೆಳೆಗಳು ರೋಗರುಜಿನಗಳು ತಗುಲುವುದು ಜಾಸ್ತಿಯಾಗಿದೆ. ಇದನ್ನು ತಡೆಗಟ್ಟಬೇಕು. ಅವಾಗ ಆಹಾರದ ಕೊರತೆ ಕಡಿಮೆಯಾಗುತ್ತದೆ. ಪ್ರತಿಯೊಂದು ಗ್ರಾಮದಲ್ಲಿಯೂ ಈ ರೋಗದ ಹಾವಳಿಯನ್ನು ತಪ್ಪಿಸಲು ಒಂದು ತಂಡವನ್ನೇ ಸರ್ಕಾರದವರು ರಚನೆ ಮಾಡಬೇಕು. ವ್ಯವಸಾಯ ಇಲಾಖೆಯವರು ಈ ಕೆಲಸ ಕಾರ್ಯಗಳ ಕಡೆಗೆ ಹೆಚ್ಚು ಗಮನಕೊಡಬೇಕು. ಈಗ ವ್ಯವಸಾಯ ಇಲಾಖೆಗೆ ಒದಗಿಸಿರುವ ಹಣದಿಂದ

ಸರ್ಕಾರದವರು ಇಡೀ ರೈತ ವರ್ಗಕ್ಕೆ ಹೆಚ್ಚು ಸಹಾಯ ಮಾಡುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ದೇಶಕ್ಕೆ ಅತ್ಯಗತ್ಯವಾದಂಥ ಮತ್ತು ನೇರವಾಗಿ ಹಳ್ಳಿಗಾಡಿನವರಿಗೆ ಯಾವುದು ಪ್ರಯೋಜನವಾಗುತ್ತದೆಯೋ, ಅಂಥ ಡಿಮ್ಯಾಂಡುಗಳು ಇವತ್ತು ನಮ್ಮ ಮುಂದೆ ಚರ್ಚೆಗೆ ಇವೆ. ಇದರಲ್ಲಿ ರೂರಲ್ ಡೆವಲಪ್‌ಮೆಂಟ್, ಅಗ್ರಿಕಲ್ಚರ್ ಅನಿಮಲ್ ಹಸ್ಬೆಂಡ್ರಿ, ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಕೋ ಆಪರೇಟಿವ್ ಶಾಖೆಗಳೂ ಸೇರಿವೆ. ಇಲ್ಲಿರುವ ಸದಸ್ಯರು ಮಾತನಾಡಿದ ಮೇಲೆಯೂ ಕೋ ಆಪರೇಟಿವ್ ಡಿಪಾರ್ಟ್‌ಮೆಂಟಿನ ಮೇಲಿನ ಕಟ್‌ಮೋಶನ್ನುಗಳು ನಮ್ಮ ಕೈಗೆ ಬರಲಿಲ್ಲ. ಸಾಧ್ಯವಾದರೆ, ಅಧ್ಯಕ್ಷರು ಸ್ವಲ್ಪ ದಯ ಮಾಡಿ ಅವುಗಳನ್ನು ಕೊಡಿಸಬೇಕು.

ಸ್ವಾಮಿ ನನ್ನ ಸ್ನೇಹಿತರಾದ ಆಲೂರು ಹನುಮಂತಪ್ಪನವರ ಸುದೀರ್ಘವಾಗಿ ಭಾಷಣ ಮಾಡಿ ಹೇಳುತ್ತಾ ತಮ್ಮ ಸ್ಟೇಟ್‌ಮೆಂಟನ್ನು ತಾವೇ ಕಾಂಟ್ರಡಿಕ್ಟ್ ಮಾಡಿಬಿಟ್ಟರು. ಕೊನೆಗೆ ಸರ್ಕಾರ ಮಾಡುವುದು ಏನೇನು ಸಾಕಾಗಿಲ್ಲವೆಂಬ ತೀರ್ಮಾನಕ್ಕೆ ಬಂದು ಬಿಟ್ಟು ಕೂತದ್ದು ನೋಡಿ ಬಹಳ ಆನಂದವಾಯಿತು.

ಶ್ರೀ ಆಲೂರು ಹನುಮಂತಪ್ಪ.—ಬಹಳ ಮಾಡಿದ್ದಾರೆ. ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಬೇಕೆಂದು ಹೇಳಿದೆ ಅಷ್ಟೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಆಡಿದ ಮಾತನ್ನು ಹೇಳುತ್ತಿದ್ದೇನೆ.

ಈಗ ನಮ್ಮ ಮುಂದೆ ಇರುವ 5 ಐಟಮ್ಮುಗಳಲ್ಲಿ ಯಾವ ಡಿಪಾರ್ಟ್‌ಮೆಂಟಿನಲ್ಲಿಯೂ ಹೊಂದಾಣಿಕೆ ಇಲ್ಲ. ಮೊದಲನೆಯದಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ವಿಷಯ ಹೇಳುತ್ತೇನೆ ಈ ಇಲಾಖೆಯಲ್ಲಿರತಕ್ಕಂಥ ಮುಖ್ಯ ಅಧಿಕಾರಿಗಳಲ್ಲಿಯೇ ಒಬ್ಬೊಬ್ಬರಲ್ಲಿ ಹೊಂದಾಣಿಕೆ ಇಲ್ಲ ಒಬ್ಬರು ಬಂದು ಮಾಡಬೇಕೆಂದು ಹೇಳಿದರು, ಇನ್ನೊಬ್ಬರು ಇನ್ನೊಂದು ಹೇಳುತ್ತಾರೆ ಒಬ್ಬರು ಏತಿ ಎಂದರೆ ಇನ್ನೊಬ್ಬರು ಪ್ರೇತಿ ಎನ್ನುತ್ತಾರೆ ಸರ್ಕಾರ ಏನೇನು ಸಾಧನೆ ಮಾಡಬೇಕೆನ್ನುವರು ಸರ್ಕಾರಕ್ಕಾದರೂ ಗೊತ್ತಿದೆಯೇ ಸರ್ಕಾರದವರು ಯಾರ್ಯಾರು ತಪ್ಪು ಮಾಡಿದ್ದಾರೆಯೋ ಅಂಥವರಿಗೆ ಶಿಕ್ಷೆ ಮಾಡಿ, ಆಡಳಿತವನ್ನು ಹಿಡಿತಕ್ಕೆ ತಂದು ದೇಶಕ್ಕೆ ಉಪಕಾರ ಮಾಡಬೇಕೆ ಹೊರತು, ಅದು ಬಿಟ್ಟು ತಮ್ಮ ವ್ಯಾಪಾರಕ್ಕೋಸ್ಕರ ತಮ್ಮ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿಬಿಟ್ಟರೆ ಸರ್ಕಾರದ ಆಡಳಿತ ನಶಿಹೋಗಿ ದೇಶಕ್ಕೆ ನ್ಯಾಯ ಮಾಡಿದ ಹಾಗೆ ಆಗುತ್ತದೆಯೆ! ಈಗ ತಾನೇ ವ್ಯವಸಾಯ ಇಲಾಖೆಯ ಮೇಲೆ ಮಾತನಾಡಿದವರು ರೈತರ ಕುಟುಂಬದ ವರಮಾನ ಉತ್ತಮವಾಗಿಲ್ಲವೆಂದು ಹೇಳಿದರು. ಹಾಗೆಂದ ಮೇಲೆ ಈ ನಾಲ್ಕು ವರ್ಷಗಳಲ್ಲಿ ವ್ಯವಸಾಯದ ಅಭಿವೃದ್ಧಿಗೋಸ್ಕರ ಏನೇನು ಮಾಡಬೇಕೆಂದು ಹೊರಟಿದ್ದೀರಿ, ಆದರಿಂದ ಯತ್‌ಕಿಂಚಿತ್ ಉಪಯೋಗವಾಗಿಲ್ಲವೆಂದು ಕಾಣುತ್ತದೆ. ಇವೊತ್ತಿನ ದಿವಸ ದೇಶದಲ್ಲಿ ಅನ್ನ, ಅನ್ನ, ಎಂಬ ಕೂಗು ಮೂಲೆ ಮೂಲೆಗಳಲ್ಲಿ ಕೇಳಿಬರುತ್ತಿದೆ. ಅನೇಕ ಕ್ಷಾಮ ನಿವಾರಣೆ ಕೆಲಸಗಳನ್ನು ತೆಗೆದುಕೊಂಡು ಏನು ಒಂದು ಆಂದೋಳನ ಮಾಡುವುದರಲ್ಲಿ ತೊಡಗಿದ್ದೇವೆಂದು ಹೇಳುತ್ತೀರೇ, ಏನು ಒಂದು ಗ್ರೋಮೋರ್ ಫುಡ್ ಎಂಬ ಚಳುವಳಿ ಹೂಡಿದ್ದೀರೋ, ಅವುಗಳನ್ನು ಇವತ್ತು ನಾವೂ ನೀವೂ ಕೂಲಂಕುಷವಾಗಿ ವಿಮರ್ಶೆ ಮಾಡಿದರೆ ಸರ್ಕಾರಕ್ಕೆ ಯಾವ ರೀತಿಯಲ್ಲಿಯೂ ಕೊಡತಕ್ಕ ಟಾರ್ಗೆಟ್ಟನ್ನು ಅಚೀವ್ ಮಾಡಲಿಕ್ಕೆ ಸಾಧ್ಯವಿಲ್ಲದೆ ಹೋಯಿತು. ಕೆರೆ ಅಂಗಳ ಮತ್ತು ಅರಣ್ಯ ಪ್ರದೇಶಗಳಲ್ಲಿ ಇವೊತ್ತಿನ ದಿವಸ ಸಾಗುವಳಿಗೆ ಕೊಟ್ಟು ಪರದೇಶಗಳಿಗೆ ಹೋಗಿ ಮಡಲು ಒಡ್ಡುವ, ಭಿಕ್ಷೆ ಬೇಡುವ ಪರಿಸ್ಥಿತಿ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿಡುವ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿ ಬಂದಿದೆ ಎಂದು ಹೇಳುವುದಾದರೆ, ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ ಅಭಿವೃದ್ಧಿ ಹಿಂದುಳಿದಿದೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಂಬುದನ್ನು ನಾವೂ ನೀವೂ ಸ್ವಲ್ಪ ಯೋಚನೆ ಮಾಡಬೇಕಾಗಿದೆ ವ್ಯವಸಾಯ ಅಭಿವೃದ್ಧಿ ಮಾಡುವಾಗ, ವ್ಯವಸಾಯ ಉತ್ಪನ್ನ ಹೆಚ್ಚುಮಾಡುವಾಗ, ದೇಶದಲ್ಲಿರತಕ್ಕ ಬಂಜರು ಜಮೀನನ್ನು ಸಾಗುವಳಿಗೆ ತರುವಾಗ, ಯಾವ ರೀತಿಯಲ್ಲಾದರೂ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು, ಅಂಕಿ ಅಂಶವಲ್ಲಿ ಇಷ್ಟಿಷ್ಟು ಭೂಮಿಯನ್ನು ಸಾಗುವಳಿಗೆ ತರಬೇಕು ಇಷ್ಟು ಲಕ್ಷ ಟನ್ ಅಹಾರ ಇಷ್ಟು ಕಾಲದಲ್ಲಿ ಬೆಳೆಯಬೇಕೆಂದು, ಅದಕ್ಕೆ ಇಷ್ಟು ಲಕ್ಷ ಎಕರೆ ಭೂಮಿಯನ್ನು ಹಂಚಿದ್ದೇವೆಂದು ಸರ್ಕಾರ ನಮ್ಮ ಮುಂದೆ ಏನಾದರೂ ಅಂಕಿ ಅಂಶಗಳನ್ನು ಇಟ್ಟಿದ್ದರೆ ನಿಜವಾಗಿ ಧನ್ಯರು ಎಂದು ಶಹಬಾಸ್‌ಗಿರಿ ಕೊಡಲು ಲಾಯಕ್ಕಿರುತ್ತಿದ್ದಿರಿ ಶ್ರೀ ರಾಚಯ್ಯನವರು 5 ಅಗ್ರಿಕಲ್ಚರ್ ಸ್ಕೂಲುಗಳನ್ನು ತೆರೆಯುವುದಕ್ಕೋಸ್ಕರ 18 ಲಕ್ಷ ರೂಪಾಯಿ ದುಡ್ಡನ್ನು ಪ್ಲಾನಲ್ಲಿ ಅಳವಡಿಸಿ, ಆ ಹಣವನ್ನು ಉಪಯೋಗಿಸಲಿಲ್ಲವೆಂದು ಶ್ರೀ ರಾಚಯ್ಯನವರು ಮೊನ್ನೆತಾನೇ ಹೇಳುತ್ತಿದ್ದರು. ಇಲ್ಲಿ ಇಲ್ಲಿ ಸಹಾಯ ನೀಡಲು ಪ್ರಯತ್ನ ಮಾಡಿದ್ದೇವೆ, ಮೂರನೆಯ ಯೋಜನೆಯ ಅವಧಿಯಲ್ಲಿ ಆ ಕಾರ್ಯವನ್ನು ಮುಗಿಸುತ್ತೇವೆಂದು ಹೇಳಿದರು.

ಒಂದು ಪಕ್ಷ ಅಧಿಕಾರಕ್ಕೆ ಬಂದಂಥ ನಮ್ಮ ಸ್ನೇಹಿತರು. ಮುಗ್ಗರಿಸಿದ್ದರೆ, ಅಧಿಕಾರ ಮಾಡತಕ್ಕವರಿಗೆ ಬುದ್ಧಿವಾದ ಹೇಳುವವರು. ಅಡ್ವೈಸ್ ಕೊಡುವವರು ಇವರು. 18 ಲಕ್ಷ ರೂಪಾಯಿ ಹಣ ಇವತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಖರ್ಚಾಗದೇ ಹೋಗುತ್ತಾ ಇದೆ, ಅದನ್ನು ಯಾವರೀತಿ ಉಪಯೋಗಿಸಬೇಕು ಎಂದು ಹೇಳಬೇಕಾಗಿತ್ತು. ಈ ದಕ್ಷತೆಯ ಅಭಾವ ಮಂತ್ರಿಗಳಲ್ಲಿದೆಯೋ ಅಥವಾ ಸರ್ಕಾರದ ಪರ್ಮನೆಂಟ್ ಎಕ್ಸಿಕ್ಯೂಟೀವ್‌ನಲ್ಲಿದೆಯೋ ಎಂಬುದನ್ನು ನಾವೂ ನೀವೂ ಯೋಚನೆ ಮಾಡುವುದಾದರೆ ಮಂತ್ರಿಮಂಡಲಕ್ಕೂ ಪರ್ಮನೆಂಟ್ ಎಕ್ಸಿಕ್ಯೂಟಿವ್‌ಗೂ ಎಲ್ಲೋ ಸ್ವಲ್ಪ ಅಪಾಯ ಇದೆ, ಒಬ್ಬರಿಗೊಬ್ಬರಿಗೆ ಹೊಂದಾಣಿಕೆ ಇಲ್ಲ ಎಂದು ಎದ್ದು ಕಾಣುತ್ತಾ ಇದೆ. ನಮ್ಮ ಸ್ನೇಹಿತರಾದ ರಾಚಯ್ಯನವರೊಂದಿಗೆ ಯಾರೂ ಡಿಸ್ಪ್ಯೂಟ್ ಮಾಡಬೇಕಾಗಿಲ್ಲ. ವ್ಯವಸಾಯಾಭಿವೃದ್ಧಿಗೋ ಸಂಪತ್ತನ್ನು ದೇಶದಲ್ಲಿ ಹೆಚ್ಚು ಮಾಡಬೇಕು. ಇವರಲ್ಲಿ ನಿಜವಾಗಿಯೂ ಕೂಡ ದೇಶಕ್ಕೆ ಪ್ರಯೋಜನವುಂಟು, ಇದನ್ನು ಸಾಧಿಸಲೇಬೇಕೆಂಬ ಆಶೆ ಇದೆ. ಇದು ಈಡೇರಬೇಕಾದರೆ ಅವರು ಎಲ್ಲೆಲ್ಲಿ ಏನೇನು ತೊಡಕಿದೆ ಎಂಬುದನ್ನೂ ಯೋಚನೆ ಮಾಡಿ ಅದನ್ನು ನಿವಾರಣೆ ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಿದರ್ಾಕ್ಷಿಣ್ಯವಾಗಿ ಹೇಳಬೇಕಾಗುತ್ತದೆ. ದೇಶದಲ್ಲಿ ಮುಖ್ಯವಾಗಿ ಬೇಕಾದ್ದು ಅಹಾರ. ಹೆಚ್ಚು ಆಹಾರ ಉತ್ಪನ್ನ ಮಾಡಬೇಕಾದರೆ ಮಳೆ ಬರಬೇಕು. ಒಂದುಪಕ್ಷ ನಮ್ಮ ಸಂಸ್ಥಾನದಲ್ಲಿ ಸ್ಕ್ಯಾಂಟಿ rain fall ಏರಿಯಾ ಇದೆ, ಬರಗಾಲಕ್ಕೆ ತುತ್ತಾದ ಕ್ಷಾಮ ಪ್ರದೇಶ ಇದೆ. ಫಲವತ್ತಾದ ಭೂಮಿ ಇದೆ. ಇವು ಮೂರನ್ನೂ ತೆಗೆದುಕೊಂಡರೆ ದೇಶದಲ್ಲಿ ಮಳೆ ಬಂದರೂ ಕೂಡ ರೈತರಿಗೆ ಬೇಕಾದಂಥ ಎತ್ತು, ನೇಗಿಲು, ಗೊಬ್ಬರ ಇವು ಅತಿ ಮುಖ್ಯವಾದುವು. ನಮ್ಮ ಮೈಸೂರು ಸಂಸ್ಥಾನದಲ್ಲಿ 36 ಸಾವಿರ ಟನ್ ಉಪಕರಣಗಳು ಬೇಕು ಎಂದು ಹೇಳಿದರು. 36 ಸಾವಿರ ಟನ್ನಲ್ಲಿ ಮೂರುಸಾವಿರದಿಂದ ನಾಲ್ಕು ಸಾವಿರ ಟನ್‌ವರೆಗೆ ಮಾತ್ರ ಒದಗಿಸಲು ಶಕ್ತಿ ಇದೆ. 36 ಸಾವಿರ ಟನ್ ಒದಗಿಸಲೇ ಇರತಕ್ಕ ಕಾಲದಲ್ಲಿ ಅದನ್ನು ಯಾವರೀತಿ ರೈತರಿಗೆ ಒದಗಿಸಿ ದೇಶದಲ್ಲಿ ಆಹಾರ ಉತ್ಪನ್ನ ಹೆಚ್ಚಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಹೇಳುತ್ತಾ ಇದ್ದೇನೆ. ದೇಶದಲ್ಲಿ ಕೊಟ್ಟಂಥ 4½ ಲಕ್ಷ ಎಕರೆ ಭೂಮಿಯಲ್ಲಿ ಎಷ್ಟು ಲಕ್ಷ ಎಕರೆ ಭೂಮಿ ಬಂಜರು ಇದೆ ಎಂದು ಕೇಳುತ್ತೇನೆ. ಕೃತಕ ಗೊಬ್ಬರವನ್ನು ಮಂಗಳೂರಿನಲ್ಲಿ ಕಾರ್ಖಾನೆ ತೆಗೆದಮೇಲೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ನಿರಾಷೆ ಮಾಡಿದ್ದೇವೆಯೋ ಅಷ್ಟು ಉತ್ಪನ್ನ ಮಾಡಿ ಕೃತಕ ಗೊಬ್ಬರದ ಬೇಡಿಕೆಯನ್ನು ದೇಶದಲ್ಲಿ ಪೂರೈಸಲು ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು. ಎಂದು

ಹೇಳಿದರು. ಎಂದ ಮೇಲೆ ಕೃತಕ ಗೊಬ್ಬರಕ್ಕೆ ಇರತಕ್ಕ ಬೇಡಿಕೆಯನ್ನೂ ಈ ಸರ್ಕಾರದ ಕೈಯಲ್ಲಿ ಒದಗಿಸುವುದಕ್ಕೆ ಆಗಿಲ್ಲ. ಎಂದರೆ ಯಾವರೀತಿ ಅವರು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಆಹಾರವನ್ನು ಉತ್ಪನ್ನ ಮಾಡುತ್ತೇವೆ ಎಂದು ಹೇಳಿದ್ದಿರೋ ಅಷ್ಟು ಉತ್ಪನ್ನ ಮಾಡುವುದಕ್ಕೆ ಕೆಲಸ ಕಾರ್ಯ ಕೈಕೊಂಡಿದ್ದಾರೆಯೋ ಎಂದರೆ ಅದೂ ಇಲ್ಲ. ಈ ಎರಡೂ ಕೂಡ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಷ್ಫಲವಾಗಿದೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅವರು ಆಹಾರ ಉತ್ಪನ್ನ ಮಾಡುತ್ತೇವೆ ಎಂದು ಹೇಳುವ ಮಾತಿಗೆ ಯಾವ ಆಧಾರವೂ ಇಲ್ಲ ಎಂದು ಖಡಾಖಂಡಿತವಾಗಿ ಒಂದು ತೀರ್ಮಾನಕ್ಕೆ ಬರಬಹುದು.

ಅನಿಮಲ್ ಹಸ್ಬೆಂಡರಿ ಇಲಾಖೆಯ ವಿಚಾರ ನಮ್ಮ ಸ್ನೇಹಿತರು ಹೇಳಿದರು. ವ್ಯವಸಾಯದ ಖಾತೆ ರೈತನ ಮನೆ ಪಕ್ಕದಲ್ಲಿ ಇರಬೇಕೇ ಹೊರತಾಗಿ, ಜೀಪು, ವ್ಯಾನು, ಪ್ರಚಾರ, ಭಿತ್ತಿ ಪತ್ರಗಳು ಇದರಿಂದ ದೇಶದಲ್ಲಿ ಹೆಚ್ಚಿನ ಆಹಾರ ಉತ್ಪನ್ನವಾಗುವುದಕ್ಕೆ ಸಾಧ್ಯವಿಲ್ಲ. ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕ್ಸ್ ಇರುವಕಡೆ ನಿರ್ದಿಷ್ಟವಾದ ಧ್ಯೇಯ ಇಟ್ಟುಕೊಂಡು ಅಗ್ರಿಕಲ್ಚರಲ್ ಎಕ್ಸ್‌ಟೆಂಷನ್ ಆಫೀಸರ್ಸ್‌ನ್ನೂ ಇಟ್ಟಿದ್ದಾರೆ. ಅವರು ಎಷ್ಟುಮಟ್ಟಿಗೆ ಪ್ರತಿ ದಿನ ಪ್ರತಿಯೊಬ್ಬ ರೈತನೊಡನೆ ಸಂಪರ್ಕ ಇಟ್ಟುಕೊಂಡಿದ್ದಾರೆ ಎಂದರೆ 30 ದಿನಗಳ ಎಣಿಕೆ ಯಲ್ಲಿದ್ದಾರೆಯೇ ಹೊರತ, ಯಾವ ರೈತನಿಗೂ ಕೂಡ ಎನ್. ಇ. ಎಸ್. ಇರುವಕಡೆ ಅಥವಾ ಸಿ. ಡಿ. ಬ್ಲಾಕ್ಸ್ ಇರುವಕಡೆ ಎಷ್ಟು ನಿರೀಕ್ಷೆ ಮಾಡಿದ್ದೇವೆಯೋ ಅಷ್ಟು ಕೆಲಸವಾಗಿಲ್ಲ ಎಂದರೆ ಸರ್ಕಾರದವರು ಈಗಲಾದರೂ ಯೋಚನೆ ಮಾಡಬೇಕು. ಮೂರನೇ ಪಂಚವಾರ್ಷಿಕ ಯೋಜನೆ ಯಲ್ಲಿ ಅವರು ಕೊಟ್ಟಿರುವ ಮಾತನ್ನು ಉಳಿಸಿಕೊಳ್ಳುವುದಕ್ಕಾದರೂ ಕೂಡ ತಮ್ಮ ಅಧಿಕಾರಿ ಗಳ ಮೇಲೆ ಸರಿಯಾದ ಒಂದು ಬಿಗಿ ಇಟ್ಟುಕೊಳ್ಳಬೇಕು. ಇಲ್ಲದೇ ಇದ್ದರೆ ಮೂರನೇ ಪಂಚ ವಾರ್ಷಿಕ ಯೋಜನೆಯಲ್ಲಿ ಇವರು ಹೇಳುವ ಮಾತು ಬರೀ ಮಾತಾಗಿ ಉಳಿಯುತ್ತದೆಯೇ ಹೊರತು ಯಾವ ಕಾರ್ಯಸಾಧನೆಯೂ ಆಗುವುದಿಲ್ಲ ಎಂದು ಹೇಳಬೇಕಾಗಿದೆ.

ಮೊನ್ನೆತಾನೆ ಬತ್ತದ ಗದ್ದೆಗೆ ರೋಗ ಹಿಡಿದಿದೆ ಎಂದು ಹೇಳಿದರು. ಇದು ಬರೀ ಸುಳ್ಳು ಆಶ್ಚರ್ಯದ ಮೇಲೆ ಆಶ್ಚರ್ಯ. ಹೆಚ್ಚಿಗೆ ಬೆಲ್ಲ ಬೆಳೆದವರು ಏನು ಮಾಡುತ್ತಾರೆ ಉಗಾದಿಹಬ್ಬ ಆದ ಮಾರನೇ ದಿನ ಮರು ಉಗಾದಿ ಬರುತ್ತದೆ ಎಂದು ಪ್ರಚಾರ ಮಾಡುತ್ತಾರೆ .ಕಾರಣ ಇನ್ನೊಂದು ಉಗಾದಿಹಬ್ಬ ಮಾಡಲಿ ತಮ್ಮ ಬೆಲ್ಲ ಖರ್ಚಾಗಲಿ ಎಂದು. ಬತ್ತದ ಫಸಲಿಗೆ ರೋಗ ಎಂದರೆ ಯಾರಿಗೆ ಹಣ ಇಲ್ಲವೋ ಅವರು ಪ್ರಚಾರ ಮಾಡುತ್ತಾರೋ ಏನೋ ? ಆಶ್ಚರ್ಯವಾಯಿತು.

ಶ್ರೀ ಎನ್. ರಾಚಯ್ಯ.—ಬತ್ತದ ಫಸಲಿಗೆ ರೋಗ ತಗಲಲ್ಲ, ಬತ್ತಕ್ಕೆ ತಗಲಿದೆ ಎಂದು ಹೇಳಿದೆ ಅಷ್ಟೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬತ್ತದ ಫಸಲಿಗೆ ತಗಲಿದೆ ಎಂದು ಹೇಳಿದರು. ಕಣಜದಲ್ಲಿ ಇರುವುದಕ್ಕೆ ಅಲ್ಲಿ ಬೀಳುವುದು ಬೇರೆ ಹುಳು ಮಾನ್ಯ ಸ್ನೇಹಿತರು ಕೇಳಿದ ಪ್ರಶ್ನೆಗೆ ಉತ್ತರ ನೀಡಿದ್ದಾರೆ ಬತ್ತಕ್ಕೆ ಅಲ್ಲ ಬತ್ತದ ಫಸಲಿಗೆ ತಾವು ಹೇಳಿದ ಉತ್ತರ ಇದೆ ತಮ್ಮ ಟೇಬಲ್ ಮೇಲೆ ಬೇಕಾದರೆ ಇಡುತ್ತೇನೆ ಅದು ಬೇರೆ ಸಮಾಚಾರ. ನಿಜವಾಗಿಯೂ ಕೂಡ ಸರ್ಕಾರ ಹೇಳಿದಂತೆ ಕಾರ್ಯವನ್ನು ಮಾಡುತ್ತಾರೆಯೋ ? ಇಂಥಾ ಒಂದು ಇಲಾಖೆ ಮಾಡತಕ್ಕ ಕೆಲಸ ಕಾರ್ಯದಲ್ಲಿ ಶ್ರೀಮಾನ್ ರಾಚಯ್ಯನವರು ಅಸಮರ್ಥರಾಗಿದ್ದಾರೆ ಎಂದು ವ್ಯಥೆ ಪಡ ಬೇಕಾದ ವಿಷಯ.

ಇದೇ ರೀತಿ ಅನಿಮಲ್ ಹಸ್ಬೆಂಡರಿಯಲ್ಲಿ ಕೂಡ ಒಂದು ಹೊಂದಾಣಿಕೆ ಇಲ್ಲ. ವ್ಯತ್ಯಾಸ ಇದೆ. ಸರ್ಕಾರ ಏರಿಗೆ ಎಳೆದರೆ ಡಿಪಾರ್ಟ್‌ಮೆಂಟು ನೀರಿಗೆ ಎಳೆಯುತ್ತದೆ. ಡಿಪಾರ್ಟ್‌ಮೆಂಟು ನೀರಿಗೆ ಎಳೆದರೆ ಸರ್ಕಾರ ಏರಿಗೆ ಎಳೆಯುತ್ತದೆ. ಅಲ್ಲಿ ಹೊಂದಾಣಿಕೆ ಇಲ್ಲ. ಕೆಲಸಕಾರ್ಯ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅಷ್ಟು ತೃಪ್ತಿಕರವಾಗಿ ನಡೆಯುತ್ತಿಲ್ಲ ಎಂದು ಹೇಳಬೇಕಾಗಿದೆ. ಏಕೆಂದರೆ ಯಾರನ್ನು ಕೇಳಿದರೂ ಆಸ್ಪತ್ರೆ ಕೊಟ್ಟಿಲ್ಲ, ಸ್ಟಾಕ್‌ಮೆರ್ಟ್ ಕಳುಹಿಸಿಲ್ಲ ಎಂದು ಹೇಳುತ್ತಾರೆ. ಈ ಸಭೆಯವರು ಎಷ್ಟು ನಿರೀಕ್ಷಣೆ ಮಾಡಿದ್ದರೋ ಅಷ್ಟು ಸಾಧನೆ ಮಾಡುವುದಕ್ಕೆ ಶ್ರೀಮಾನ್ ರಾಚಯ್ಯನವರು ಇದರಲ್ಲಿ ಕೂಡ ಅಸಮರ್ಥರಾಗಿದ್ದಾರೆ. ಇದನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ಮೊನ್ನೆ ಪಬ್ಲಿಕ್ ಹೆಲ್ತ್ ಅಂಡ್ ಮೆಡಿಸನ್ ವಿಷಯ ಚರ್ಚೆಯಾದಾಗ ಕಾಂಪೌಂಡರ್ಸ್ ಇಲ್ಲ ಡಾಕ್ಟರು ಗಳಿಲ್ಲ, ಆಸ್ಪತ್ರೆಗಳಿಲ್ಲ ಎಂದು ಏನು ಹೇಳಿದೆವೋ ಅದೇ ರೀತಿ ಈ ಪಶು ಸಂಗೋಪನೆಯ ವಿಷಯದಲ್ಲೂ ಒತ್ತಿ ಒತ್ತಿ ಹೇಳಬೇಕಾಗಿದೆ. ಅದಕ್ಕೆ ಸ್ಟಾಕ್‌ಮೆರ್ಟ್ ಮತ್ತು ಕಾಂಪೌಂಡರು ಗಳ ಟ್ರೈನಿಂಗ್‌ಗೆ ಹೆಚ್ಚು ಗಮನ ಕೊಟ್ಟು ದೇಶದಲ್ಲಿರತಕ್ಕ ಪ್ರತಿಯೊಂದು ಗೋವನ್ನು ಕೂಡ ಖಾಯಿಲೆಯಿಂದ ಪಾರುಮಾಡಿ ಸಂರಕ್ಷಣೆ ಮಾಡಬೇಕೆಂಬ ಯಾವ ಒಂದು ಉದಾತ್ತವಾದ ಧ್ಯೇಯವಿದೆಯೋ ಅದನ್ನು ಕಾರ್ಯಾಚರಣೆಗೆ ತರದಿದ್ದಲ್ಲಿ ನಿಜವಾಗಿಯೂ ಅದು ಗಗನಕುಸುಮ ವಾಗುತ್ತದೆಯೇ ಹೊರತು ಜನತೆಗೆ ಪ್ರಯೋಜನವಾಗುವುದಿಲ್ಲ. ಅದಕ್ಕೆ ಸರ್ಕಾರದವರು ಈ ವಿಚಾರದಲ್ಲಿ ಸ್ವಲ್ಪ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ.

ವೆಟರ್ನರಿ ಕಾಲೇಜಿನಲ್ಲೂ ಕೂಡ ಪಾರ್ಟಿ, ಗುಂಪುಗಳ ರಾಜ್ಯ ನಡೆಯುತ್ತಾ ಇದೆ. ನಾನು ತಿಳಿದುಕೊಂಡಿದ್ದೆ ಮಂತ್ರಿಗಳಾಗುವುದಕ್ಕೆ, ಚೇರ್ಮನ್ ಆಗುವುದಕ್ಕೆ ಪಾರ್ಟಿ ಕಟ್ಟುತ್ತಾರೆ ಎಂದು. ಅಧಿಕಾರಿಗಳಲ್ಲೂ ಕೂಡ ಈ ಗುಂಡಿನ ಮನೋಭಾವ ಬೆಳೆಯುತ್ತಾ ಇದೆ. ಇದನ್ನೂ ಸರ್ಕಾರ ಮೂಲೋತ್ಪಾಟನೆ ಮಾಡದಿದ್ದರೆ ಇದು ಮತ್ತಷ್ಟು ಪ್ರಬಲವಾಗಿ ಉದಾತ್ತವಾದ ಧ್ಯೇಯ ಇಟ್ಟುಕೊಂಡಿದ್ದರೂ ಕೂಡ ನಿಮ್ಮ ಕೈಯಿಂದ ರಾಜ್ಯಭಾರ ಮಾಡು ವುದಕ್ಕೆ ಆಗುವುದಿಲ್ಲ. ನಿಮ್ಮಲ್ಲಿ ಶಕ್ತಿಯಿಲ್ಲ ಎಂದು ಹೇಳಬೇಕಾಗಿದೆ. ಏಕೆಂದರೆ ನೀವು ಎಷ್ಟೇ ಬುದ್ಧಿವಂತರಾದರೂ ಕೂಡ ಎಲ್ಲಿ ಎಡವಿಸಬಹುದು, ಮುಗ್ಗರಿಸಬಹುದು, ಕೆಡವ ಬಹುದು, ಕೆಟ್ಟ ಹೆಸರು ತರಬಹುದು ಎಂದು ಅವರಿಗೆ ಗೊತ್ತು. ನೀವು ಎಷ್ಟೇ ಮೈತುಂಬ ಕಣ್ಣಿಟ್ಟುಕೊಂಡು ಕೆಲಸ ಮಾಡಿದರೂ ಕೂಡ ತಪ್ಪಿಸಿಕೊಳ್ಳುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ವೆಟರ್ನರಿ ಕಾಲೇಜಿನಲ್ಲೂ ಕೂಡ ಆ ಒಂದು ವ್ಯವಹಾರ ಗುಂಪು ಇದೆ. ಅಮೃತಮಹಲ್ ಕಾವಲಿನಲ್ಲಿ ಸಾವಿರಾರು ರೂಪಾಯಿ ಹಣವನ್ನು ದುರುಪಯೋಗ ಪಡಿಸಿದಂಥಾ ಒಬ್ಬ ಅಧಿಕಾರಿ ಯನ್ನೂ ಮತ್ತೆ ವೆಟರ್ನರಿ ಕಾಲೇಜಿಗೆ ತೆಗೆದುಕೊಂಡುಬಂದು ಯಾರದೋವಶೀಲ ಬಾಜಿಗೆ ಒಳಗಾಗಿ ಅವರಿಗೆ ಪ್ರಮೋಶ್ಞ ಕೊಟ್ಟು ಪ್ರೊಫೆಸರ್ ಆಗಿ ನಾಮಕರಣ ಮಾಡಿರುವುದು ಸರಿಯೇ ಎಂದು ಮಾನ್ಯ ಸ್ನೇಹಿತರಾದ ರಾಚಯ್ಯನವರನ್ನು ಕೇಳುತ್ತೇನೆ. ಸರ್ಕಾರ ಇದನ್ನೆಲ್ಲಾ ನಿಗ್ರಹ ಮಾಡದಿದ್ದರೆ ಇದರಿಂದ ಕೂಡ ಅನುಕೂಲವಾಗುವುದಿಲ್ಲ.

ಅಗ್ರಿಕಲ್ಚರರ್ ಕಾಲೇಜಿನಲ್ಲಿ ಬಡವರಿಗೆ ಅವಕಾಶ ಸಿಕ್ಕಬೇಕು. ಮುಖ್ಯಮಂತ್ರಿಗಳಿಂದ ಹಿಡಿದು ಕೊನೇ ಉಪಮಂತ್ರಿಗಳವರೆಗೆ ಎಲ್ಲರೂ ಬಡವರೇ ಇದ್ದಾರೆ 800–400–300 ರೂಪಾಯಿ ಭೂಕಂದಾಯ ಕೊಡುವವರು, ಮೂರನೇ ತರಗತಿಯಲ್ಲಿ ಪಾಸ್ ಮಾಡಿದವರಿಗೆ ಗವರ್ನ್‌ಮೆಂಟ್ ಆಫ್ ಇಂಡಿಯಾ ಸ್ಕಾಲರ್‌ಷಿಪ್. ಹೀಗಿರುವಾಗ ಹಿಂದುಳಿದವರಿಗೆ ರಕ್ಷಣೆ ಎಲ್ಲಿದೆ ಎಂದು ಯೋಚನೆ ಮಾಡಬೇಕು. ಇದನ್ನು ನಮ್ಮ ಮಿತ್ರರಾದ ಶ್ರೀಮಾನ್ ರಾಚಯ್ಯ ನವರು ದೀರ್ಘವಾಗಿ ಯೋಚನೆ ಮಾಡಿ ತಪ್ಪು ಮಾಡಿದ ಅಧಿಕಾರಿಗಳಿಗೆ ತಕ್ಕ ಶಿಕ್ಷೆ ವಿಧಿಸುತ್ತಾ ರೆಂದು ನಂಬುತ್ತೇನೆ.

ಗ್ರಾಮಾಭಿವೃದ್ಧಿ ವಿಚಾರ ನೋಡಿದರೆ ಪ್ರತಿಯೊಂದು ಊರಿಗೂ ರಸ್ತೆ, ಕುಡಿಯುವ ನೀರಿನ ಬಾವಿ ಇನ್ನೂ ಒದಗಿಸಿಲ್ಲ. ಅನೇಕ ಸಾರಿ ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಎರಡುಸಾವಿರ ಜನರಿರುವ ಊರಿನಲ್ಲಿ ಕೊಚ್ಚೆ ಪಕ್ಕದಲ್ಲಿರುವ ಬಾವಿ.

ಯಲ್ಲಿ ನೀರನ್ನು ತುಂಬಿಕೊಂಡು ಹೋಗುವುದನ್ನು ಕಂಪಾಯದ ಶಾಖಾ ಮಂತ್ರಿಗಳಿಗೂ ಮತ್ತು ಸ್ಥಳೀಯ ಸಂಸ್ಥೆ ಸಚಿವರಿಗೂ ತೋರಿಸಿದರೂ ಕೂಡ ಇದುವರೆಗೂ ಇನ್ನೂ ಕುಡಿಯುವ ನೀರಿನ ಬಾವಿಯನ್ನು ಹಾಗಲವಾಡಿಗೆ ಒದಗಿಸಿಲ್ಲ. ಇದು ಒಂದು ಉದಾಹರಣೆ ಮಾತ್ರ. ಈ ದಿವಸ ನಾಗರೀಕ ದೇಶವೆನಿಸಿರುವುದರಲ್ಲಿ ರಾಮರಾಜ್ಯ ಕಟ್ಟುವುದಾಗಿ ಹೇಳುತ್ತಿರುವಾಗ ಗ್ರಾಮಗಳ ಅವಸ್ಥೆ ಈ ರೀತಿಯಿದೆ. ಗುಬ್ಬಿ ಮತ್ತು ಸಿರಾ ತಾಲ್ಲೂಕುಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದಾಗಿರುವ ಅನುಕೂಲ ನೋಡಬಹುದು. 190 ಬಾವಿಗಳು ಎಂದು ಮಟ್ಟಕ್ಕಿಂತ ಕೆಳಕ್ಕಿಳಿದಿಲ್ಲ, ಕೆಲವಕ್ಕೆ ಪ್ಲಾಟ್‌ಫಾರಂ ಕಟ್ಟಿಲ್ಲ, ಕೆಲವಕ್ಕೆ ಗಾಲಿಯಲ್ಲಿ 8–10 ಮಟ್ಟ ಇಳಿಸಿರುವ ಕಡೆ ಕೆಲಸ ಪೂರೈಸಿಲ್ಲ. ಹೀಗಾಗಿ ಸರ್ಕಾರ ಇದಕ್ಕಾಗಿ ಖರ್ಚುಮಾಡುವುದು ವ್ಯರ್ಥ ವಾಗುತ್ತಿದೆ. ಜನರಿಗೆ ಅದರ ಪೂರ್ಣ ಉಪಯೋಗವಾಗುತ್ತಿಲ್ಲ. ಇದನ್ನು ಗಮನಿಸಿ ಸರ್ಕಾರ ಕೊಡುವ ಹಣ ಸದುಪಯೋಗವಾಗುವಂತೆ ವ್ಯವಸ್ಥೆ ಮಾಡಿ ಕೆಲಸ ಶೀಘ್ರವಾಗಿ ಮಾಡಿಸ ಬೇಕೆಂದು ಅಷ್ಟು ಮಾತ್ರ ಹೇಳುತ್ತೇನೆ.

ಸಾಮುದಾಯಿಕ ಅಭಿವೃದ್ಧಿ ಯೋಜನೆ ಮೇಲೆ ಹೇಳಿದ್ದೇ ಹೇಳಬೇಕಾಗಿದೆ. ಸರ್ಕಾರ ಮಾಡಿದ್ದೇ ಮಾಡುತ್ತಿದೆ. ಒಂದುಗಂಟೆ ಪುರಸತ್ತೂ ಇಲ್ಲದೆ ಶ್ರೀ ಲಿಂಗಾರೆಡ್ಡಿಯವರು ತಿರುಗಿ ದರೂ ಏನು ಸಾಧಿಸಿದ್ದಾರೆ? ಒಂದು ದಿವಸ ನಿಟ್ಟುಸಿರು ಬಿಡುತ್ತಾ ಏನೋ ಹೇಳಿದರು. No use of beating a dead horse. ಅವರ ಕೈಲಾಗುವುದೇ ಇಷ್ಟು. ಅಕ್ಕನೋ ಪಾದಿಯಲ್ಲಿರುವ ನಾಗರತ್ನಮ್ಮನವರು ಚಾಮಯ್ಯನವರ ಮೇಲೆ ಕೋಪಗೊಂಡರು. ಅದಕ್ಕೆ ಸ್ವಲ್ಪ ಮಿತಿಯಿರಬೇಕು. ಅವರ ಮನಸ್ಸನ್ನು ನೋಯಿಸಬಾರದು. ಈ ದಿವಸ ಗ್ರಾಮ ಸೇವಕರು ಮತ್ತು ಸೇವಕಿಯರು ಹಳ್ಳಿಹಳ್ಳಿಗೆ ಹೋಗಿ ಮನಸ್ಸಿಟ್ಟು ಕೆಲಸ ಮಾಡದಿದ್ದರೆ ಸರ್ಕಾರ ಏನುತಾನೆ ಮಾಡಲು ಸಾಧ್ಯ! ಅವರು ಕೊಟ್ಟ ಅಂಕಿ ಅಂಶಗಳನ್ನು ಸರ್ಕಾರ ನಂಬಿದರೆ ಪಟೇಲ ಶ್ಯಾನುಭೋಗರ ಅಂಕಿ ಅಂಶ ನಂಬಿದಂತಾಗುತ್ತದೆ. ಸಿರಾ ಮತ್ತು ಗುಬ್ಬಿ ತಾಲ್ಲೂಕುಗಳಲ್ಲಿ ಗ್ರಾಮ ಸೇವಕ ಮತ್ತು ಸೇವಕಿಯರು ಯಾವರೀತಿ ಈ ದಿನ ಇದ್ದಾರೆಂಬುದನ್ನು ನೋಡಿ They are dictators today and B.D.O. is not in a position to execute his work or satisfy the Government or satisfy the people B.D.O. ಗಳನ್ನು ಯಾವ ರೀತಿ ಆರಿಸಿದ್ದಾರೆಂದರೆ ಯಾರು ನಿಜವಾಗಿಯೂ ದೇಶಭಕ್ತರೋ, ಯಾರಿಗೆ ಕೆಲಸ ಮಾಡುವುದಕ್ಕೆ ಇಚ್ಛೆಯಿದೆಯೋ ಅವರನ್ನು ತೆಗೆದುಕೊಳ್ಳದೆ ಯಾರೋ ಬೇಕಾದವರನ್ನು ನೇಮಿಸಿಕೊಂಡಿದ್ದಾರೆ. It is a rotten material. ಯಾವ B.D.O. ಕೇಳಿ, ಗ್ರಾಮ ಸೇವಕರನ್ನು ಹತೋಟಿಗೆ ತರಲು ಸಾಧ್ಯವಿಲ್ಲ, ತಮ್ಮನ್ನು ಬೇರೆ ಕಡೆಗೆ ವರ್ಗ ಮಾಡಿ ಎಂದು ಹೇಳುತ್ತಾರೆ. ಗ್ರಾಮ ಸೇವಕರು ಪುನಃ ಪೂರ್ವಕವಾಗಿ ಕೆಲಸ ಕೊಡುವುದಿಲ್ಲ. ಅವರಿಂದ ನಿಜವಾಗಿಯೂ ಸರಿಯಾದ ಪ್ರಯೋಜನವಾಗುವುದಿಲ್ಲ. ನಿರುದ್ಯೋಗ ಸಮಸ್ಯೆ ನೀಗಲು ಯಾರನ್ನೋ ನೇಮಕ ಮಾಡಿರುವುದರಿಂದ ಅವರಿಗೆ ಯೋಗ್ಯತೆಯಿಲ್ಲದೆ ದೇಶದ ಹಣ ವ್ಯರ್ಥವಾಗು ತ್ತಿದೆ. ಇದಕ್ಕೆ ಅವಕಾಶವಿರಬಾರದು. ದೇಶಕ್ಕೆ ಕಲ್ಯಾಣವಾಗಬೇಕು. ತಾಲ್ಲೂಕು ಬೋರ್ಡ್ ಅಧ್ಯಕ್ಷರು ಬಂದಮೇಲೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಜೀಪ್ ಯಾರ ಹತ್ತಿರವಿರಬೇಕೆಂಬ ಬಗ್ಗೆ B.D.O. ಗಳಿಗೂ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೂ ವಿವಾದವುಂಟಾಗಿದೆ. ಸರ್ಕಾರ ದವರು ಬೆಳಗಾದರೆ ಒಂದು ಸರ್ಕ್ಯುಲರ್ ಈ ವಿಚಾರದಲ್ಲಿ ಹೊರಡಿಸುತ್ತಿದ್ದಾರೆ. ಒಂದು ಕಾಗದ ಡೆಪ್ಯುಟಿ ಸೆಕ್ರೆಟರಿಯಿಂದ, ಇನ್ನೊಂದು ಸೆಕ್ರೆಟರಿಯಿಂದ ಹೋಗುತ್ತದೆ. ನಿರ್ದಿಷ್ಟವಾದ ಸೂಚನೆಯಿಲ್ಲದೆ B.D.O. ಮತ್ತು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಲ್ಲಿ ಮನಸ್ತಾಪಕ್ಕೆ ಕಾರಣವಾಗಿದೆ. ಮನೆಯಲ್ಲಿ ಹೆಂಡತಿಗೆ ಖಾಯಿಲೆ ಬಂದರೆ ಜ್ಯೋತಿಷ್ಯರನ್ನು ಕರೆತರುವುದಕ್ಕೆ, ಸೂಸೈಟಿ ಬೀಗದ ಕೈ ಮರೆತುಬಂದರೆ ಅವನ್ನು ತರಲು 15 ಮೈಲಿ ಹೋಗಿ ಬರುವುದಕ್ಕೆ, ನಾಟಕ ನೋಡುವುದಕ್ಕೆ, ಅಂಗಡಿ ಪ್ರಾರಂಭೋತ್ಸವ ಮುಂತಾದುವುಗಳಿಗೆಲ್ಲ ಜೀಪ್ ಉಪ

(ಶ್ರೀ ಸಿ. ಜಿ. ಮುಕ್ಕಣ್ಣಪ್ಪ)

ಯೋಗಿಸುತ್ತಿದ್ದಾರೆ. ಇದಕ್ಕೆ ಉಪಯೋಗಿಸಿರುವ ಹಣ ಕೇಂದ್ರ ಸರ್ಕಾರದ್ದು. ಜೀಪ್ ಯಾವರೀತಿ ಉಪಯೋಗವಾಗುತ್ತಿದೆಯೆಂಬುದು ಅವರಿಗೆ ತಿಳಿದರೆ ಅವರೇನು ತಿಳಿದು ಕೊಂಡಾರು ? ಆದುದರಿಂದ ಇಂಡಿಯಾ ಸರ್ಕಾರದವರೂ ಮತ್ತು ನೀವು ಒಂದು ಒಡಂಬಡಿಕೆ ಮಾಡಿಕೊಂಡು ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿ ರಾಜ್ಯ ಜಯಪ್ರದವಾಗುವಂತೆ ಒಂದು ವ್ಯವಸ್ಥೆ ಮಾಡಿ. ಡೆಪ್ಯುಟಿ ಕಮಿಷನರಿಗೆ ಹೇಳಿದರೆ ನಾನೇನು ಮಾಡೋಣ ಎನ್ನುತ್ತಾರೆ. ಮಂತ್ರಿಗಳವರೆಗೆ ದೂರು ಹೋಗುತ್ತದೆ, ನಮ್ಮ ಕೈಲಿ ಸಾಧ್ಯವಿಲ್ಲ ಎನ್ನುತ್ತಾರೆ. ಇದನ್ನೆಲ್ಲಾ ಗಮನಿಸಿ ಸಂಬಂಧಪಟ್ಟ ಮಂತ್ರಿಗಳು ಜೀಪ್ ಯಾವರೀತಿ ಉಪಯೋಗಿಸಬೇಕೆಂಬ ಬಗ್ಗೆ ಸೂಕ್ತ ಸಲಹೆ ಕೊಟ್ಟು ಕೆಟ್ಟ ಹೆಸರು ಬಾರದಂತೆ ನೋಡಿಕೊಳ್ಳಬೇಕು.

ಸಹಕಾರ ನನ್ನ ಪೆಟ್ ಸಬ್‌ಜೆಕ್ಟ್. ಈ ಇಲಾಖೆಯಲ್ಲಿ ಬೇಕಾದಷ್ಟು ಹಣ ಖರ್ಚಾದರೂ ಅದರಿಂದೇನು ಜನರಿಗೆ ಉಪಯೋಗವಾಗಿದೆ ಯೆಂಬುದನ್ನು ಮಂತ್ರಿಗಳು ಈ ನಾಲ್ಕು ವರ್ಷ ಗಳಲ್ಲಿ ಯಾವತ್ತೂ ಹೇಳಲಿಲ್ಲ. ಈ ಹಣ ಸದುಪಯೋಗವಾಗಬೇಕು.

1-30 P.M.

ಈ ರೀತಿ ಹಣ ತಿಂದಿದ್ದಾರೆ. ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿ ಗಳಾಗಿದ್ದಾಗ್ಗೆ, ಹಣ ತಿಂದವರನ್ನು ಕಠಿಣವಾಗಿ ಶಿಕ್ಷೆ ಮಾಡಬೇಕೆಂದು ಹೇಳುತ್ತಿದ್ದರು. ಈಗ ನಿಮ್ಮ ಕೈಗೆ ಅಧಿಕಾರ ಬಂದ ಮೇಲೆ ಅವರು ಮತ್ತೆ ದುರುಪಯೋಗ ಮಾಡಲು ಪ್ರಾರಂಭಿಸಿದ್ದಾರೆ. ಆದ್ದರಿಂದ ತಾವು ಸ್ವಲ್ಪ ತಮ್ಮ ಸಹಪಾಠಿಗಳಿಗೂ ಹೇಳಿ, ಸರ್ಕಾರ ಕೊಡತಕ್ಕ ಹಣವನ್ನು ನ್ಯಾಯವಾಗಿ ಖರ್ಚು ಮಾಡಲಿ, ಹಣ ತಿಂದವರ ಮೇಲೆ ಉಗ್ರವಾದ ಕಾರ್ಯಕ್ರಮ ಕೈಗೊಳ್ಳಲಿ ಎಂದು ಹೇಳುತ್ತೇನೆ. ಇಲ್ಲದಿದ್ದರೆ ತಾವು ಕೆಟ್ಟ ಹೆಸರು ಹೊರಬೇಕಾಗಿ ಬರುತ್ತದೆಂದು ನಾನು ಹೇಳಬಯಸುತ್ತೇನೆ.

† ಶ್ರೀ ಡಿ. ಮೂಕಪ್ಪ (ಸಾಗರ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ವ್ಯವಸಾಯ, ಗ್ರಾಮಾಭಿವೃದ್ಧಿ, ಸಾಮುದಾಯಿಕ ವಿಸ್ತರಣಾ ಯೋಜನೆ—ಇವುಗಳಿಗೆ ಸಂಬಂಧಪಟ್ಟ ಈ ಬೇಡಿಕೆಯನ್ನು ಅನುಮೋದಿಸುತ್ತಾ ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಸರ್ಕಾರ ದವರ ಗಮನಕ್ಕೆ ತರಬಯಸುತ್ತೇನೆ. ಆಹಾರ ಮತ್ತು ವ್ಯವಸಾಯದ ವಿಚಾರದಲ್ಲಿ ಹೇಳುವುದಾದರೆ, ದೇಶಕ್ಕೇ ಅತಿಮುಖ್ಯವಾದದ್ದು ಆಹಾರ. ನಮ್ಮ ದೇಶದಲ್ಲಿ ಆಹಾರದ ಸ್ವಾವಲಂಬನೆಯಾಗಬೇಕಾದರೆ, ಆಹಾರವನ್ನು ಸೃಷ್ಟಿಮಾಡತಕ್ಕಂಥ ಮನುಷ್ಯನ ಪರಿಸ್ಥಿತಿ ಯನ್ನು ಸ್ವಲ್ಪ ಪರಿಶೀಲಿಸಬೇಕಾದ್ದು ಅಗತ್ಯ. ಇದುವರೆಗೂ ಆಹಾರದ ಸ್ವಾವಲಂಬನೆ ಯಾಗದಿರುವುದಕ್ಕೆ ಕಾರಣಗಳು ಕೆಲವಿವೆ. ಅದರಲ್ಲಿ ಅತಿ ಮುಖ್ಯವಾದ್ದು, ಆಹಾರವನ್ನು ಬೆಳೆಯತಕ್ಕ ಮನುಷ್ಯನೇ ಸ್ವಾವಲಂಬಿಯಾಗದಿರುವುದು. ಭೂಮಾಲೀಕರ ಗುಲಾಮತನದಿಂದ ಸಾಗುವಳಿದಾರರನ್ನು ಎಲ್ಲಿಯವರೆಗೆ ಬಿಡಿಸುವುದಿಲ್ಲವೋ ಅಲ್ಲಿಯವರೆಗೆ ನಮ್ಮಲ್ಲಿ ಆಹಾರ ಬೆಳೆಯುವವರು ಸ್ವಾವಲಂಬಿಯಾಗುವುದು ಬಹಳ ಕಷ್ಟ.

ಎರಡನೆಯ ಕಾರಣವೆಂದರೆ, ಇಂದು ವ್ಯವಸಾಯದ ಇಲಾಖೆಯಿಂದ ವ್ಯವಸಾಯಕ್ಕೆ ಆಗತಕ್ಕ ಅನೇಕ ಅನುಕೂಲತೆಗಳಲ್ಲಿ ಕೆಲವು ಪ್ರಗತಿದಾಯಕವಾಗದಿರುವುದು. ಮೊಟ್ಟ ಮೊದಲನೆಯದಾಗಿ, ನಮ್ಮ ದೇಶದಲ್ಲಿ ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿ ಹೇರಳವಾದ ಭೂಸಂಪತ್ತು ಹಾಗೂ ಸಾಕಷ್ಟು ನೈಸರ್ಗಿಕ ಸಂಪತ್ತಿದ್ದರೂ, ಅಲ್ಲಿಯ ವಾತಾವರಣಕ್ಕನು ಸಾರವಾಗಿ ವ್ಯವಸಾಯದ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡದಿರುವುದು. ಅಲ್ಲಿನವರಿಗೆ ವ್ಯವಸಾಯದ ತಜ್ಞರ ನೆರವೇ ಇಲ್ಲವೆಂದು ಹೇಳಬಹುದು. ಮಲೆನಾಡು ಪ್ರದೇಶದಲ್ಲಿ ಅತಿ ಮುಖ್ಯವಾಗಿ ಬೆಳೆಯತಕ್ಕಂಥಾದ್ದು ಅಡಕೆ ಬಾಗಾಯಿತು

ಬೆಳೆ. ಬಹಳ ಕಷ್ಟನಷ್ಟಗಳನ್ನು ಅವರು ಅನುಭವಿಸುತ್ತಿದ್ದಾರೆ. ಅಲ್ಲಿಗೆ ಶಜ್ಞರ ನೆರವು ನೀಡಿ ಅಲ್ಲಿನ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಸಹಾಯ ದೊರಕಿಸಿಕೊಡಬೇಕಾದ್ದು ಅಗತ್ಯ. ಒಂದು ಉದಾಹರಣೆ ಹೇಳುವುದಾದರೆ, ಸಾಗರ ತಾಲ್ಲೂಕು, ಮತ್ತೂರು ಊರಿನಲ್ಲಿ ಸರ್ಕಾರದವರು ಒಂದು ವ್ಯವಸಾಯದ ಫಾರಂ ರಚನೆ ಮಾಡಿದ್ದರು. ಬಹುಶಃ ಇತ್ತೀಚೆಗೆ ಅದನ್ನು ರದ್ದುಮಾಡಿರುವಂತೆ ಕಾಣುತ್ತೆ. ಡಾ. ಕೋಲ್ಮನ್‌ರವರು ಇದನ್ನು ರಚನೆ ಮಾಡಿ, ಅದರ ಮೂಲಕ ಮಲೆನಾಡು ಪ್ರದೇಶದ ರೈತ ವ್ಯವಸಾಯಗಾರರಿಗೆ ಉಪಯೋಗವನ್ನೊದಗಿಸುವುದಲ್ಲದೆ, ವಿಧವಿಧವಾದ ವ್ಯವಸಾಯದ ಸಮಸ್ಯೆಯನ್ನು ಪರಿಶೀಲಿಸತಕ್ಕ ವ್ಯವಸ್ಥೆ ಮಾಡಿತ್ತು. ಕಾರಣಾಂತರದಿಂದ ಅದು ವಜಾ ಆಗಿ, ಈಗ ಅಲ್ಲಿ ಬರತಕ್ಕಂಥ ಕೊಳೆರೋಗ, ಚಂಡರೋಗ ಮುಂತಾದ ರೋಗಗಳನ್ನು ತಡೆಗಟ್ಟುವ ವಿಧಾನ ವರಿಯದೆ ಫಲವತ್ತಾದ ಅಡಕೆ ಫಸಲು ನಷ್ಟವಾಗುತ್ತಿದೆ. ಇದನ್ನು ಪರಿಶೀಲನೆ ಮಾಡಿ ಅದನ್ನು ತಹಬಂದಿಗೆ ತರುವುದಕ್ಕೆ ಇದುವರೆಗೂ ಯಾವ ವ್ಯವಸ್ಥೆಯನ್ನೂ ಮಾಡದಿರುವುದು ವಿಷಾದಕರ. ಇನ್ನಾದರೂ ಸರ್ಕಾರದವರು ಒಂದು ರಿಸರ್ಚ್ ಫಾರಂ ತೆರೆದು, ಮಲೆನಾಡು ಪ್ರದೇಶದ ರೈತರಿಗೆ ಅದರಲ್ಲೂ ಅಡಕೆ ಬೆಳೆಗಾರರಿಗೆ ಸಾಕಷ್ಟು ಅನುಕೂಲವನ್ನು ಕಲ್ಪಿಸಿ ಕೊಡುತ್ತೀರೆಂದು ನಂಬಿದ್ದೇನೆ.

ಹಾಗೆಯೇ, ವ್ಯವಸಾಯದಲ್ಲಿ ಹೆಚ್ಚಿನ ಉತ್ಪನ್ನವನ್ನು ಮಾಡಬೇಕೆಂಬ ದೃಷ್ಟಿಯಿಂದ, ವ್ಯವಸಾಯದ ಡಿಪಾರ್ಟ್‌ಮೆಂಟಿನವರು ಕೊಡತಕ್ಕ ಅನೇಕ ಅನುಕೂಲಗಳನ್ನು ಸಕಾಲದಲ್ಲಿ ದೊರೆಯುವಂತೆ ಮಾಡಬೇಕೆಂದು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ಈಗ ಗೊಬ್ಬರ, ಕಬ್ಬಿಣದ ಸಾಮಾನು ಇತ್ಯಾದಿಗಳು ಸಕಾಲದಲ್ಲಿ ದೊರೆಯುತ್ತಿಲ್ಲ. ಸೊಸೈಟಿಗಳ ಮುಖಾಂತರ ತೆಗೆದುಕೊಳ್ಳಬೇಕೆಂದು ಇತ್ತೀಚೆಗೆ ಸರ್ಕಾರ ಹುಕುಂ ಮಾಡಿದ್ದೀರಿ. ಆದರೆ, ಸೊಸೈಟಿಗಳವರು indent ಮಾಡಿ 2-3 ವರ್ಷಗಳಾದರೂ ಸಾಮಾನುಗಳು ಬರುತ್ತಿಲ್ಲ. ಅದರಲ್ಲೂ ಮಲೆನಾಡಿನಲ್ಲಿ, ಇವು ದೊರಕುವುದೇ ದುರ್ಲಭ. ಇದು ವಿಷಾದಕರವೇ ಸರಿ. ಹೀಗೆ ವಿಳಂಬವಾಗದಂತೆ ಸಕಾಲದಲ್ಲಿ ರೈತರಿಗೆ ಸಿಕ್ಕುವಂತೆ ಮಾಡುವುದು ಅತ್ಯವಶ್ಯಕವಾದ ಕೆಲಸವೆಂದು ತಾವು ತಿಳಿಯಬೇಕು.

ಮಲೆನಾಡು ಪ್ರದೇಶದಲ್ಲಿ ನೈಸರ್ಗಿಕ ಸಂಪತ್ತು ಬೇಕಾದಷ್ಟಿದೆಯೆಂದು ನಾನು ಬೇಕಾದಷ್ಟು ಹೇಳಿದ್ದೇನೆ. ಆದರೆ ಇದನ್ನು ಉಪಯೋಗಿಸಿಕೊಳ್ಳಬೇಕಾದರೆ, ವ್ಯವಸಾಯ ಮಾಡತಕ್ಕ ಜನರಿಗೆ ಭೂ ಮಟ್ಟವನ್ನು ವ್ಯವಸಾಯಕ್ಕಾಗಿ ಸರಿಪಡಿಸಿ ಹೆಚ್ಚು ಪ್ರದೇಶವನ್ನು ರೂಢಿಗೆ ತರುವುದಕ್ಕೆ ತಕ್ಕ ಸಹಾಯವನ್ನು ಒದಗಿಸಿಕೊಡಬೇಕು. ಇಂಥ ಕಡೆ ಬುಲ್‌ಡೋಜರುಗಳನ್ನು ಒದಗಿಸದಿರುವುದು ಶೋಚನೀಯ. ಆದ್ದರಿಂದ ಮಲೆನಾಡು ಪ್ರದೇಶಕ್ಕೆ ಅತ್ಯಗತ್ಯವಾಗಿ ತಾಲ್ಲೂಕಿಗೆ ಒಂದು ಬುಲ್‌ಡೋಜರ್ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇತ್ತೀಚೆಗೆ ಲಿಂಗನಮಕ್ಕಿ ಜಲಾಶಯದಿಂದಾಗಿ ಮುಳುಗಡೆಯಾದ ಪ್ರದೇಶದಿಂದ ಸಾವಿರಾರು ಜನ ಅತ್ತ ವಲಸೆ ಬಂದವರಾಗಿ ಅಲ್ಲಿರುವ ಕಾಡು ಪ್ರದೇಶವನ್ನು ಉಪಯೋಗಿಸಿಕೊಳ್ಳುವ ಅಗತ್ಯತೆ ಬಂದಿದೆ. ಆದ್ದರಿಂದ ಆದಷ್ಟು ಬೇಗನೆ ಬುಲ್‌ಡೋಜರ್ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ವ್ಯವಸಾಯ ವಿಚಾರವಾಗಿ ಇಷ್ಟು ಹೇಳಿ, ಸಹಕಾರದ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸಹಕಾರ ಇಲಾಖೆಯೆಂದರೆ, ದೇಶದಲ್ಲಿ ಸಂಪತ್ತು ಸೃಷ್ಟಿ ಮಾಡುವ ಜನರಿಗೆ ಆರ್ಥಿಕ ಸಹಾಯವನ್ನು ಒದಗಿಸಲು ಹೊಣೆಗಾರಿಕೆ ಹೊಂದಿರತಕ್ಕ ಇಲಾಖೆ. ವಿಶಾಲ ದೃಷ್ಟಿಯಿಂದ ಯೋಚಿಸುವುದಾದರೆ ಯಾರು ಕೃಷಿಯಿಂದ ಸಂಪತ್ತನ್ನು ಸೃಷ್ಟಿ ಮಾಡುತ್ತಾನೆಯೋ, ಅವನಿಗೆ ನೆರವು ನೀಡಿ ಪೋಷಿಸತಕ್ಕ ಇಲಾಖೆ ಇದು. ಹೀಗಿರುವಲ್ಲಿ

(ಶ್ರೀ ಡಿ. ಮೂಕಪ್ಪ)

ಇಂದು ವಾಸ್ತವವಾಗಿ ನೋಡಿದಲ್ಲಿ ಈ ಇಲಾಖೆಯಿಂದ ರೈತರಿಗೆ ನೆರವು ಸಿಕ್ಕುತ್ತಿಲ್ಲವೆನ್ನ ಬಹುದು. ಕಾರಣ ಇಷ್ಟೆ. ನಾನು ಮುಂಚೆಯೇ ಹೇಳಿದಂತೆ ಅವರಿಗೆ ಮುಂದುಪಾಗಿ ದೀಡು ಆಧಾರ ಇಡಲು ಜಮೀನು ಸ್ವತ್ತಿನ ಅನುಕೂಲತೆಯಿಲ್ಲನಿರುವುದರಿಂದ, ಅವನಿಗೆ ಸಾಲ ದೊರೆಯುವುದು ಕಷ್ಟವಾಗಿದೆ. ಹೀಗಾಗಿ ಸಾಲದ ಸೌಲಭ್ಯ ಅವನಿಗೆ ದೊರೆಯದೆ, ಯಾವಾಗಲೂ ಅವನು ಮಾಡುವ ಕೃಷಿಯಿಂದ ಉತ್ಪನ್ನ ಹೆಚ್ಚಿಗೆ ಬರುತ್ತಿಲ್ಲ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಮ್ಮ ಸಹಕಾರದ ಪದ್ಧತಿಯನ್ನು ಸೂಕ್ತವಾಗಿ ಬದಲಾವಣೆ ಮಾಡಿ ರೈತನ ಬೆಳೆಯ ಆಧಾರದ ಮೇಲೆಯಾದರೂ ಅವನಿಗೆ ಆರ್ಥಿಕ ಸಹಾಯವನ್ನು ನೀಡತಕ್ಕ ವ್ಯವಸ್ಥೆಯನ್ನು ಮಾಡಿಕೊಡುವುದು ಅಗತ್ಯ. ಈ ರೀತಿ ಆರ್ಥಿಕ ಸಹಾಯ ವನ್ನೊದಗಿಸುವುದರಿಂದ ಅತನು ಉತ್ಕೃಷ್ಟ ವ್ಯವಸಾಯ ಮಾಡಿ ತನ್ನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ.

ಆ ರೀತಿ ವ್ಯವಸಾಯಕ್ಕೆ ಸ್ವಂತ ಜವಾಬ್ದಾರಿಯ ಮೇಲೆ ಆರ್ಥಿಕ ಸಹಾಯವನ್ನು ನೀಡುವ ವ್ಯವಸ್ಥೆ ಸಹಕಾರ ಕ್ಷೇತ್ರದಲ್ಲಿ ಆಗಬೇಕೆಂದು ಹೇಳ ಬಯಸುತ್ತೇನೆ.

ಹಾಗೆಯೇ ಪಶುವೈದ್ಯ ಇಲಾಖೆಯ ವಿಷಯದಲ್ಲಿ ಒಂದೆರಡು ಸಲಹೆಗಳನ್ನು ಕೊಡ ಬಯಸು ತ್ತೇನೆ. ಸಾಧಾರಣವಾಗಿ ನಮ್ಮ ಮಲೆನಾಡು ಪ್ರಾಂತದಲ್ಲಿ ಮೂರು ನಾಲ್ಕು ಮೈಲಿ ಗಳಿಗೊಂದು ಹಳ್ಳಿಯಿರುತ್ತದೆ. ನಾಲ್ಕು ಐದು ಮನೆಗಳಿರುವ ಸಣ್ಣ ಹಳ್ಳಿಗಳು ಒಂದು ಊರಿನಿಂದ ಇನ್ನೊಂದೂರಿಗೆ ಹೋಗಲು ವಾಹನಸೌಕರ್ಯ, ರಸ್ತೆಯ ಸೌಕರ್ಯವಿಲ್ಲದಿರುವ ಪ್ರದೇಶ. ಹೀಗಿರುವಾಗ ಯಾವುದೋ ಒಂದುಕಡೆ ಪಶುವೈದ್ಯ ಆಸ್ಪತ್ರೆಯನ್ನಿಟ್ಟು ಮಿಕ್ಕ ಹಳ್ಳಿಗಳ ವರೆಲ್ಲರೂ ಅಲ್ಲಿಗೆ ಬಂದು ಔಷಧ ಸೌಕರ್ಯ ಪಡೆಯುವುದೆಂದರೆ ಕಷ್ಟ. ಹಳ್ಳಿಗಳಲ್ಲಿ ಪಶುರಕ್ಷಣೆ ಮಾಡುವುದು ಅಗತ್ಯ. ಪಶುಗಳ ವಿಚಾರದಲ್ಲಿ ಇನ್ನೊಂದು ವಿಚಾರ ಹೇಳುವುದಾದರೆ, ನಮ್ಮ ಮಲೆನಾಡಿನ ಪಶುಗಳಿಗೂ ಮೈದಾನದ ಪಶುಗಳಿಗೂ ವ್ಯತ್ಯಾಸವಿದೆ. ಮಲೆನಾಡಿನ ತಳಿಗಳನ್ನು ಬದಲಾವಣೆಮಾಡಿ ಉತ್ತಮಗೊಳಿಸಬೇಕಾದದು ಅಗತ್ಯ. ಅಲ್ಲಿ ಪಶು ಸಂಪತ್ತನ್ನು ಅಭಿವೃದ್ಧಿ ಮಾಡಲು ಸಂಶೋಧನೆ ನಡೆಸಬೇಕಾದುದಗತ್ಯ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ಸೂಚಿಸುತ್ತೇನೆ.

ಇನ್ನು ಗ್ರಾಮಾಭಿವೃದ್ಧಿಯ ವಿಷಯ. ಈಗಾಗಲೇ ಗ್ರಾಮಾಭಿವೃದ್ಧಿಯ ಜವಾಬ್ದಾರಿ ಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿಕೊಟ್ಟಿರುವುದು ಸಂತೋಷಕರವಾದ ವಿಷಯ. ಆದರೆ ಈ ಕಾರ್ಯವನ್ನು ಪಂಚಾಯಿತಿಗಳವರು ಎಷ್ಟುಮಟ್ಟಿಗೆ ನಡೆಸುತ್ತಾರೆಂದು ನೋಡುವ ಜವಾಬ್ದಾರಿಯನ್ನು ಮೇಲಿನ ಅಧಿಕಾರಿಗಳು, ಅದರಲ್ಲಿಯೂ ರೆವಿನ್ಯೂ ಅಧಿಕಾರಿಗಳು ನಿರ್ಲಕ್ಷಿ ಸಿದ್ದಾರೆಂದು ಹೇಳ ಬಯಸುತ್ತೇನೆ. ಏಕೆಂದರೆ, ನಮ್ಮ ಮಲೆನಾಡು ತಾಲ್ಲೂಕುಗಳಾದ ಸಾಗರ, ಸೊರಬ ತಾಲ್ಲೂಕುಗಳಲ್ಲಿ ಈಗಾಗಲೇ ಗ್ರಾಮ ಪಂಚಾಯಿತಿಗಳಾಗಿ ಒಂಬತ್ತು ತಿಂಗಳಾಯಿತು. ಆದರೆ ಅಲ್ಲಿ ಗ್ರಾಮ ಪಂಚಾಯಿತಿಗಳ ವಿಚಾರದಲ್ಲಿ ಯಾವ ನಿರ್ದಿಷ್ಟ ಕಾರ್ಯ ಕ್ರಮವನ್ನು ತೆಗೆದುಕೊಳ್ಳದೆ ಪಂಚಾಯಿತಿಯವರು ಏನೇನು ಕಾರ್ಯಗಳನ್ನು ಮಾಡಬೇಕು ಎಂಬ ಬಗ್ಗೆ ಅಲ್ಲಿನ ಜನರಿಗೆ ತಿಳಿವಳಿಕೆ ಕೊಡದೇಯಿದ್ದುದರಿಂದ ಅವರು ಕಾರ್ಯೋನ್ಮುಖರಾಗದೆ ಕಾರ್ಯವಿಮುಖರಾಗುತ್ತಿದ್ದಾರೆ. ಇದರಿಂದ ಈಗಾಗಲೇ ಜನರಲ್ಲಿ ಅಸಮಾಧಾನ ಬಂದಿರುವುನ್ನು ಹೋಗಲಾಡಿಸಬೇಕಾದರೆ ಅಧಿಕಾರಿಗಳು ಪ್ರಮುಖಪಾತ್ರ ವಹಿಸಬೇಕು. ಹೀಗೆ ಮಾಡಿ ಗ್ರಾಮ ಪಂಚಾಯಿತಿಗಳ ಪುರೋಭಿವೃದ್ಧಿಗೆ ತಕ್ಕ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಸಮೂಜಾಭಿವೃದ್ಧಿ ವಿಚಾರ. ನಮ್ಮ ದೇಶದಲ್ಲಿ ಈ ಯೋಜನೆಯನ್ನು ಜಾರಿಗೆ ತಂದು ಈಗಾಗಲೇ ಸುಮಾರು ಐದು ವರ್ಷವಾಗಿದೆ. ಇದರಲ್ಲಿ ಕಾರ್ಯ ಎಷ್ಟು ಮಟ್ಟಿಗೆ ನಡೆದಿದೆ

ಯೆಂಬುದನ್ನು ನೋಡಿದರೆ, ನಿರೀಕ್ಷಿಸಿದಷ್ಟು ನಡೆದಿಲ್ಲವೆಂದು ಹೇಳಬೇಕಾಗಿದೆ. ಇದಕ್ಕೆ ಕಾರಣ ವಿಷ್ಟೆ. ಒಂದು ಉದಾಹರಣೆ ಹೇಳಬೇಕಾದರೆ, ಒಂದು ರಸ್ತೆಯನ್ನು ಮಾಡಿಸಬೇಕೆಂದು ನಾವು ಸಲಹೆ ಕೊಟ್ಟರೆ, ಅದಕ್ಕೆ ಅಂದಾಜು ತಯಾರುಮಾಡಿ ಅದನ್ನು ಮಾಡಲು ಕ್ರಮ ಕೈಗೊಂಡರೆ, ಆ ಕೆಲಸವನ್ನು ನಾಲ್ಕೈದು ವರ್ಷವಾದರೂ ಪೂರ್ಣಗೊಳಿಸುವುದಿಲ್ಲ. ಜನರಿಗೆ ಅಸಮಾಧಾನ ವಾಗುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ತಡವಾಗಲು ಕಾರಣವೇನೇ ಇರಬಹುದು. ಒಂದೊಂದು ಕಾರ್ಯವನ್ನೂ ಆದಷ್ಟು ಜಾಗ್ರತೆ ಮಾಡಿ ಜನರ ಮನಸ್ಸನ್ನು ಒಲಿಸಿಕೊಂಡು ಅವರಿಗೆ ತೃಪ್ತಿಯಾಗುವಂತೆ ಮಾಡಬೇಕು. ಅಲ್ಲಿನ ಅಧಿಕಾರಿಗಳು ಹೆಚ್ಚಿನ ಆಸಕ್ತಿ ವಹಿಸಿ ಸಮಾಜ ಅಭಿವೃದ್ಧಿ ಕಾರ್ಯವನ್ನು ಉತ್ತಮಗೊಳಿಸಬೇಕು. ಇದಕ್ಕೆ ಸರಿಯಾದ ವ್ಯವಸ್ಥೆ ಮಾಡ ಬೇಕೆಂದು ಹೇಳಿ, ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ಮಾನ್ಯ ಸಭಾಧ್ಯಕ್ಷರೆ, ದೇಶದಲ್ಲಿ ಬಹು ಮುಖ್ಯವಾದ ವ್ಯವಸಾಯ ಕೇವಲ ಅವಿದ್ಯಾವಂತರ ಕೈಗೆ ಸಿಕ್ಕಿದೆ; ವಿದ್ಯಾವಂತರು ವ್ಯವ ಸಾಯಕ್ಕೆ ಹೋಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ವ್ಯವಸಾಯ ಮಾಡತಕ್ಕ ರೈತನಿಗೆ ನಮ್ಮ ದೇಶದಲ್ಲಿ ಬೆಲೆಯಿಲ್ಲ. ಆದಕಾರಣ ವ್ಯವಸಾಯ ಕಸಬು ಶ್ರೇಷ್ಠ ಕಸಬೆಂದು ತಿಳಿದು ಅದಕ್ಕೆ ಬೆಲೆಬರತಕ್ಕದ್ದು ಅಗತ್ಯ. ಇದನ್ನು ಸರ್ಕಾರ ತಿಳಿದು ತಕ್ಕ ವ್ಯವಸ್ಥೆ ಮಾಡುವವರೆಗೆ ವ್ಯವಸಾಯ ಅಭಿವೃದ್ಧಿಯಾಗುವುದಿಲ್ಲ. ವಿದ್ಯಾವಂತರ ಕೈಗೆ ವ್ಯವಸಾಯ ಸಿಕ್ಕಿದರೆ ಅದು ಅಭಿವೃದ್ಧಿಯಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ವಿದ್ಯಾವಂತನಾದ ಮಗನನ್ನು ವ್ಯವ ಸಾಯಕ್ಕೆ ಕಳುಹಿಸಿ ಅವಿದ್ಯಾವಂತನನ್ನು ಬೇರೆ ಕಸಬುಗಳಿಗೆ ಕಳುಹಿಸುತ್ತಾರೆ. ಆದರೆ ನಮ್ಮಲ್ಲಿ ಹಾಗಿಲ್ಲ. ವಿದ್ಯಾವಂತ ಮಕ್ಕಳು ಬೇರೆ ಕೆಲಸಗಳಿಗೆ ಹೋಗಿ ಅವಿದ್ಯಾವಂತರು ವ್ಯವಸಾಯ ವನ್ನವಲಂಬಿಸುತ್ತಾರೆ. ಇಲ್ಲಿನ ವ್ಯವಸಾಯ ವಿದ್ಯಾಭ್ಯಾಸವನ್ನು ಪ್ರಸ್ತಾಪಿಸುತ್ತೇನೆ. ನಮ್ಮ ವ್ಯವಸಾಯ ಕಾಲೇಜಿನಲ್ಲಿ ಅಭ್ಯಾಸಮಾಡತಕ್ಕ ವಿದ್ಯಾರ್ಥಿಗಳು ಅಲ್ಲಿ ಶಿಕ್ಷಣ ಹೊಂದಿದಮೇಲೆ ಕಡ್ಡಾಯವಾಗಿ ವ್ಯವಸಾಯ ಕ್ಷೇತ್ರದಲ್ಲಿದ್ದು ತಾವು ಕಲಿತ ವಿದ್ಯೆಯನ್ನು ವಿನಿಯೋಗಿಸಿ ಜನರಿಗೆ ಅನುಕೂಲ ಮಾಡಬೇಕೆಂದು ಕಡ್ಡಾಯವಾದ ಷರತ್ತು ಹಾಕಬೇಕು. ಅವರು ವ್ಯವಸಾಯ ಕ್ಷೇತ್ರದಲ್ಲಿ ಸೇವೆ ಮಾಡಲು ಏನು ಅನುಕೂಲ ಬೇಕೋ ಅದನ್ನು ಸರ್ಕಾರ ಒದಗಿಸಬೇಕು. 1957ರಲ್ಲಿ ಎಲ್ಲ ಇಲಾಖೆಗಳ ನೌಕರರ ಸಂಬಳದ ಸ್ಕೇಲುಗಳನ್ನು ಪರಿಷ್ಕಾರ ಮಾಡಿದರು. ಆದರೆ ವ್ಯವಸಾಯದ ಇಲಾಖೆಯಲ್ಲಿ ಕಾಲೇಜಿನಲ್ಲಿ ಹಿಂದಿದ್ದ ರೀತಿಯೇ ಇದೆ. ವೆಟೆರಿನರಿ ಕಾಲೇಜಿನವರ ಸಂಬಳದ ಪುನರ್ವಿಮರ್ಶೆ ಹೋದ ವರ್ಷ ಆಯಿತು. ಈ ಕಾಲೇಜಿನ ಸ್ಕೇಲುಗಳು ಬೇರೆಯಾಗಿವೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಪಕ್ಷಪಾತ ನೀತಿಯ ಮನೋಭಾವ ತೋರಿಸುವುದರಿಂದ ಅಲ್ಲಿರುವ ಅಧ್ಯಾಪಕರಲ್ಲಿ ಅತೃಪ್ತಿಯುಂಟಾಗುತ್ತದೆ. ಬಾಕಿ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಬಿ.ಎಸ್.ಸಿ., ಎಂ.ಎಸ್.ಸಿ. ಮಾಡಿರುವವರಿಗೆ ಯಾವ ಸ್ಕೇಲುಗಳಿವೆಯೆಂಬುದನ್ನು ನೋಡಿ ಈ ಕಾಲೇಜಿನವರಿಗೂ ಅದೇರೀತಿ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಸ್ವಾಮಿ ಈಗ ತಾಲ್ಲೂಕಿನಿಂದ ತಾಲ್ಲೂಕಿಗೆ ವ್ಯವಸಾಯ ಇನ್‌ಸ್ಪೆಕ್ಟರುಗಳನ್ನು ಹಾಕು ತ್ತಾರೆ ಅವರ ಕರ್ತವ್ಯವೇನು? ಇವತ್ತು ರಾಷ್ಟ್ರೀಯ ವಿಸ್ತರಣೆ ಯೋಜನೆ ಆದಮೇಲೆ ಅವರಿಗೆ ಹೆಚ್ಚು ಅನುಕೂಲವಾಗುತ್ತಿದೆ. ಒಂದು ತಾಲ್ಲೂಕಿನಲ್ಲಿ 180-200 ಹಳ್ಳಿಗಳಿರುತ್ತವೆ ಅಂದರೆ ಅಲ್ಲಿ ಒಬ್ಬ ಇನ್‌ಸ್ಪೆಕ್ಟರ್ ಏನುಮಾಡಿಯಾನು? ಅದರ ದೆಸೆಯಿಂದ ನನ್ನ ಸಲಹೆ ಏನೆಂದರೆ ತಾಲ್ಲೂಕ್ ಮಟ್ಟದಲ್ಲಿ ವ್ಯವಸಾಯ ಪ್ರಯೋಗ ಕ್ಷೇತ್ರಗಳನ್ನು ಮಾಡಬೇಕು. ಆಗ ವ್ಯವಸಾಯ ಆಧುನಿಕ ವಾಗಿ ಮುಂದುವರಿಯುತ್ತದೆ. ಬೀಜ ಉತ್ಪಾದನೆ, ಬೆಳೆಗಳಿಗೆ ಬರತಕ್ಕ ರೋಗಗಳು ಅವನ್ನು ತಡೆಯುತಕ್ಕ ಕ್ರಮ, ಇವುಗಳಿಂದ ವ್ಯವಸಾಯ ಅಭಿವೃದ್ಧಿಯಾಗಿ ಮುಂದುವರಿಯುತ್ತಿದೆ. ಕೆಲವ ರಿಗೆ ತಾಲ್ಲೂಕ್ ಹೆಡ್‌ಕ್ವಾರ್ಟರಿಗೆ ಹತ್ತಿರವಾಗಿರುವ ಸ್ಥಳದಲ್ಲಿ ಏನಾದರೂ ಹತ್ತಾರು ಎಕರೆ

(ಶ್ರೀ ಬಿ. ಎಸ್. ಶಂಕರಪ್ಪ)

ಜಮೀನಿದ್ದು ಅಲ್ಲಿ ವ್ಯವಸಾಯ ಮಾಡುವುದಕ್ಕೆ ತಕ್ಕ ಅನುಕೂಲವಿಲ್ಲದೆ ಹೋದರೆ ಅವರಿಗೆ ಇವತ್ತಿನ ದಿವಸ ಸಬ್ಸಿಡಿಯನ್ನು ಕೊಡುತ್ತಿದ್ದೀರಿ. ಆದ್ದರಿಂದ ಜನರು ಇನ್ನು ಮುಂದೆ ಆಧುನಿಕವಾಗಿ ವ್ಯಾವಸಾಯ ಮಾಡುವ ವಿಚಾರವನ್ನು ವಿಮರ್ಶೆ ಮಾಡಬೇಕು. ಈಗ ಏನಾಗಿದೆಯೆಂದರೆ ಸರ್ಕಾರದವರು ವ್ಯವಸಾಯದ ಬಗ್ಗೆ ಸ್ವಲ್ಪ ಅನುಮಾನವನ್ನು ಹೊಂದಿರುವವರಾಗಿದ್ದಾರೆ. ಏಕೆಂದರೆ ಕಾಲಾನುಗುಣವಾಗಿ ಸಕಾಲಕ್ಕೆ ಮಳೆ ಬೆಳೆಗಳು ಬಾರದೆ ಅಲ್ಲಿನ ಬೆಳೆಯೇ ಹಾಳಾಗುತ್ತಿದೆ. ರೈತರಿಗೆ ಕೊಡತಕ್ಕ ಸಬ್ಸಿಡಿ ಅಥವಾ ಒಂದು ರಿಯಾಯತಿ ಕೊಡುವ ವಿಚಾರದಲ್ಲಿ ಒಂದು ಅಂತರವನ್ನು ಸಿದ್ಧಪಡಿಸಬೇಕು. 25″ ಕಡಮೆಯಾಗಿ ಮಳೆಯಾಗುವ ಏರಿಯಾ ಯಾವುದು 40″ ಮಳೆ ಯಾಗುವ ಪ್ರದೇಶಯಾವುದು ಎಂಬುದನ್ನು ನಿರ್ಧರಿಸಬೇಕು ಕಡಮೆ ಮಳೆಯಾಗುವ ಪ್ರದೇಶದಲ್ಲಿ ವ್ಯವಸಾಯ ಫೇಲ್ಯೂರ್ ಆಗುವುದರಿಂದ ತನ್ಮೂಲಕ ದೇಶದ ಆಹಾರೋತ್ಪತ್ತಿ ಕಡಮೆ ಯಾಗುತ್ತದೆ. ಆದ್ದರಿಂದ ಅಂತಹ ಕಡೆಗಳಲ್ಲಿ ಇರ್ರಿಗೇಷನ್ ಬಾವಿಗಳನ್ನು ತೆರೆಯಲು ರೈತರಿಗೆ ಉದಾರವಾಗಿ ಸರ್ಕಾರದವರು ಹಣ ಸಹಾಯ ಮಾಡಬೇಕು. ರಿಯಾಯತಿ ಕೊಡಬೇಕು ಸಬ್ಸಿಡಿ ಕೊಡಬೇಕು. ದೇಶದಲ್ಲಿ ಆದರಲ್ಲೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಯಾವರೀತಿ ಕೈಗಾರಿಕೆಗಳ ಬೆಳವಣಿಗೆ ಯಾಗುತ್ತಿವೆಯೋ ಅದೇರೀತಿ ಹಳ್ಳಿಗಳಲ್ಲೂ ವ್ಯವಸಾಯ ಅಭಿವೃದ್ಧಿ ಕಾಮಗಾರಿಗಳು ಬೆಳವಣಿಗೆಯಾಗಬೇಕು. ದೈವದತ್ತವಾದ ಸಂಪತ್ತಾಗಿರತಕ್ಕ ವ್ಯವಸಾಯಕ್ಕೆ ಎಷ್ಟು ಖರ್ಚಾದರೂ ಪರವಾಇಲ್ಲ. ನೀವು ಕೈಗಾರಿಕೆಗಳಿಗೆ ಖರ್ಚುಮಾಡುವಷ್ಟು ವ್ಯವಸಾಯಕ್ಕೆ ಖರ್ಚು ಮಾಡುತ್ತಿಲ್ಲ. ಇರ್ರಿಗೇಷನ್ ಪಂಪು ಸೆಟ್ಟುಗಳಿಗೋಸ್ಕರ ನೀವು ಖರ್ಚುಮಾಡುತ್ತಿರುವುದು ಬಹಳ ಕಮ್ಮಿ. ರೈತರು ಈಗಾಗಲೇ ಬೇಕಾದಷ್ಟು ರೋಡ್ ಸೆಸ್ ಬೇರೆ ಕೊಡುತ್ತಿದ್ದಾರೆ. ವ್ಯವಸಾಯ ಎಲ್ಲಿ ಫೇಲ್ಯೂರ್ ಆಗುತ್ತದೋ ಅಲ್ಲಿ ನೀರಾವರಿ ಸೌಕರ್ಯವನ್ನು ಕೊಡಬೇಕು, ಎಲ್ಲ ಮಳೆಯ ಅಭಾವ ಇರುತ್ತದೋ ಅಲ್ಲಿಗೆ ಇರ್ರಿಗೇಷನ್ ಪಂಪುಸೆಟ್ಟುಗಳನ್ನು ಒದಗಿಸಬೇಕು. ಅದಕ್ಕಾಗಿ ಯಥೇಚ್ಛವಾಗಿ ವಿದ್ಯುಚ್ಛಕ್ತಿ ಸರಬರಾಯಿ ಮಾಡಬೇಕು. ಅದಕ್ಕಾಗಿ ಒಂದು ನಿಯಮವನ್ನು ಅನುಸರಿಸಬೇಕು. ವ್ಯವಸಾಯ ಮಾಡತಕ್ಕವರು ಬರಗಾಲ ಬರುವ ಪ್ರದೇಶಗಳಲ್ಲಿ ಬಹು ಎಚ್ಚರಿಕೆಯಿಂದ ತಮ್ಮ ವ್ಯವಸಾಯ ಅಭಿವೃದ್ಧಿಗೆ ಬೇಕಾದ ಸಕಲ ಸಲಕರಣೆಗಳನ್ನು ಮೊದಲೇ ಒದಗಿಸಿ ಕೊಂಡಿರಬೇಕು. ಒಂದು ವೇಳೆ ಲುಕ್ಸಾನು ಆದರೂ ಚಿಂತೆಯಿಲ್ಲ. ಆದ್ದರಿಂದ ಸರ್ಕಾರದವರು ಬರಗಾಲ ಬರುವ ಪ್ರದೇಶಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಎಲ್ಲ ವಿಧವಾದ ಸೌಲಭ್ಯಗಳನ್ನು ವ್ಯವಸಾಯ ಅಭಿವೃದ್ಧಿಗಾಗಿ ಒದಗಿಸಬೇಕು. ಕೆಲವು ಕಡೆ ಬಾವಿಗಳನ್ನು ಕಟ್ಟಿಸುವದಕ್ಕಾಗಿ ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಆದರೂ ಆ ನೀರನ್ನು ಕುಡಿಯುವುದಕ್ಕೂ ಆಗುವುದಿಲ್ಲ. ಆಗ ಬೋರ್ ವೆಲ್ಸ್ ಉಪಯೋಗಿಸಿ ಒಂದು ಮಟ್ಟ ಬಾವಿಯನ್ನು ಇನ್ನೂ ಕೆಳಗೇ ಇಳಿಸಬೇಕು. ಅಂದ ಮೇಲೆ ಸಾವಿರಾರು ರೂಪಾಯಿಗಳು ಇದಕ್ಕಾಗಿ ಖರ್ಚಾಗುತ್ತದೆ. ಆಗಲೂ ನೀರು ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಇದರಿಂದ ಎಷ್ಟೋ ಲುಕ್ಸಾನು ಆಗುತ್ತದೆ. ಬೋರಿಂಗ್ ಮೆಷಿನ್ಸ್ ಏನಿವೆ ಅವು ಒಂದೊಂದು ಎಂಟು-ಒಂಬತ್ತು ಸಾವಿರ ರೂಪಾಯಿಗಳಾಗುತ್ತವೆ. ಎಲ್ಲಿ ಹಣದ ಅನುಕೂಲಗಳುಂಟೋ ಅಲ್ಲಿ ತಾಲ್ಲೂಕ್ ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಯವರು ಹೆಚ್ಚಿಗೆ ಬೋರಿಂಗ್ ಮೆಷಿನ್ನುಗಳನ್ನು ತರಿಸಿಟ್ಟು ಕೊಂಡು ಅವುಗಳ ಮೂಲಕ ಆ ಏರಿಯಾದಲ್ಲಿ ಹೆಚ್ಚಿಗೆ ಬಾವಿಗಳನ್ನು ತೆಗೆದು ಉತ್ತಮ ಮಟ್ಟದಲ್ಲಿ ವ್ಯವಸಾಯವನ್ನು ಮಾಡಬಹುದು. ಹೆಚ್ಚಿಗೆ ಆಹಾರೋತ್ಪಾದನೆಯನ್ನು ಸಹ ಪಡೆಯಬಹುದು. ಅಂತಹವರಿಗೆ ಸರ್ಕಾರದವರು ಸಾಲವಗೈರೆ ಕೊಟ್ಟು ಹೆಚ್ಚಿಗೆ ಆಹಾರವನ್ನು ಬೆಳೆಯುವುದಕ್ಕೆ ತಕ ವ್ಯವಸ್ಥೆಮಾಡುತ್ತಾರೆಂದು ನಾನು ನಂಬಿರುತ್ತೇನೆ. ಚಾನಲ್ ಏರಿಯಾಗಳಲ್ಲಿ ಬಾವಿಗಳ ಅನಾವಶ್ಯಕ. ಅಲ್ಲಿ ಇರ್ರಿಗೇಷನ್ ಪಂಪ ಸೆಟ್ಟುಗಳ ಮೂಲಕ ವ್ಯವಸಾಯ ಮಾಡುವುದನ್ನು ಪರಿಶೀಲಿಸಬೇಕು. ಅಂತಹ ಕಡೆಗಳಲ್ಲಿ ದೈವಿಕ, ಸಂಪತ್ತು ಕಡಮೆ ಎಂದು

ನಾನು ತಿಳಿದಿದ್ದೇನೆ. ಒಟ್ಟಿನಲ್ಲಿ ರೈತರಿಗೆ ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕಾಗಿ ವಿದ್ಯುಚ್ಛಕ್ತಿ ಸರಬರಾಯಿ ಮತ್ತು ಯಥೇಚ್ಛವಾಗಿ ಹಣಸಹಾಯವನ್ನು ನೀರಾವರಿ ಪಂಪು ಸೆಟ್ಟುಗಳಿಗಾಗಿ ಮತ್ತು ಬಾವಿಗಳಿಗಾಗಿ ಸಹಾಯಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಪಶುಪಾಲನೆ ವಿಷಯ. ವ್ಯವಸಾಯಮಾಡುವವರಿಗೆ ಪಶುಸಂಪತ್ತು ಅತಿಮುಖ್ಯವಾದುದು. ಇವತ್ತಿನ ದಿವಸ ಏನಾಗಿದೆ ಗೋಹತ್ಯೆಗಳು ನಡೆಯುತ್ತಿವೆ. ಅದು ಹೋಗಬೇಕು. ಅಮೃತಮಹಲ್ ಕಾವಲನ್ನು ದನಗಳ ಸಂಪತ್ತನ್ನು ಹೆಚ್ಚಿಸುವುದಕ್ಕೋಸ್ಕರ ಮತ್ತು ಅವು ಮೇಯುವುದಕ್ಕೋಸ್ಕರ ಆ ಜಾಗವನ್ನು ಇಟ್ಟುಕೊಂಡಿರಬೇಕೆಂದು ನಾನು ಹೇಳುತ್ತೇನೆ. ಈಗಿನ ಸನ್ನಿವೇಶದಲ್ಲಿ ದನಗಳು ಮೇಯುವುದಕ್ಕೆ ಬೇಕಾದಷ್ಟು ಜಾಗ ಅತ್ಯಾವಶ್ಯಕ ಕ್ಯಾಟಲ್ ಫಾರಂಗಳು ಅದಕ್ಕಾಗಿಯೇ ಇರಬೇಕು, ದನಗಳು ಮೇಯತಕ್ಕ ಜಾಗವನ್ನು ಯಾವಕಾರಣದಿಂದಲೂ ವ್ಯವಸಾಯಕ್ಕೆ ಉಪಯೋಗಿಸಬಾರದು. ಹಾಗೆ ಮಾಡಿದರೆ ಒಂದೊಂದು ಸಂದರ್ಭದಲ್ಲಿ 20 ಹಸುಗಳು ಸೇರಿದ್ದರೂ ಕೊನೆಯಪಕ್ಷ ಒಂದು ಸೇರು, ಎರಡು ಸೇರು ಹಾಲು ಕೊಡುವುದಿಲ್ಲ ಬೇಸಾಯದಲ್ಲಿಯೂ ಅವು ಉಪಯೋಗಕ್ಕೆ ಬರಲಿಕ್ಕಿಲ್ಲ–ಸಾರ್ವತ್ರಿಕವಾಗಿ ದೊಡ್ಡದೊಡ್ಡ ಗ್ರಾಮಗಳಲ್ಲಿ ವಿಲೇಜ್ ಪಂಚಾಯಿತಿಗಳು ಗೂಳಿಗಳನ್ನು, ಹೋರಿಗಳನ್ನು ಕೊಡುತ್ತಾರೆ ಅವುಗಳ ಮೂಲಕ ಒಳ್ಳೆಯ ತಳಿಯನ್ನು ಅಭಿವೃದ್ಧಿಮಾಡುತ್ತಾರೆ. ಆದರೆ ಅವುಗಳನ್ನು ರೈತರು ಚೆನ್ನಾಗಿ ಕಾಪಾಡುತ್ತಾ ಇಲ್ಲ. ಸಂಬಂಧಪಟ್ಟ ಇಲಾಖೆಯವರೂ ಸಹ ರೈತರಿಗೆ ಹೋರಿಗಳನ್ನು ಕೊಡುತ್ತಾರೆ, ಅವರು ಸಿಕ್ಕಾಬಟ್ಟೆ ಗೂಳಿಗಳನ್ನು ಬಿಟ್ಟಿರುತ್ತಾರೆ. ಅದು ತಪ್ಪು. ಮೊದಲನೆಯ ಬೀಜವನ್ನು ವಿಲೇಜ ಪಂಚಾಯಿತಿಯವರು ಕಡ್ಡಾಯವಾಗಿ ಮೇಂಟೇನ್ ಮಾಡಬೇಕು. ತನ್ಮೂಲಕ ಆ ತಳಿಯನ್ನು ಅಭಿವೃದ್ಧಿಮಾಡಿದರೆ, ರೈತನಾದವನು ಎಷ್ಟು ಚೆನ್ನಾಗಿ ವ್ಯವಸಾಯ ಮಾಡಬಹುದು ಎಂದು ನಾನು ಹೇಳುತ್ತೇನೆ. ಸಂವೃದ್ಧಿಯಾಗಿ ಬಡವರಾಗಿರುವವರಿಗೆ ಬಹುಬೇಗ ನರಿಷ್‌ಮೆಂಟ್ ಸಿಕ್ಕುತ್ತದೆ. ಈಚೆಗೆ ವಿಜ್ಞಾನ ಸಂಶೋಧನೆ ಬಹಳವಾಗಿ ಹಿಂದೆ ಬೀಳುತ್ತಿದೆ ಅಗ್ರಿಕಲ್‌ಚರಲ್ ಕಾಲೇಜಿನಲ್ಲಿ ತಜ್ಞರಿಗೆ ಇರತಕ್ಕ ಜವಾಬ್ದಾರಿ, ಹೊರೆ, ಇವತ್ತು ಬಹಳವಾಗಿದೆ. ಆದರೆ ಅನೇಕರಲ್ಲಿ ಈಚೆಗೆ ಒಂದು ರೀತಿಯ ಕಳಂಕವುಂಟಾಗಿ ಅವರ ಒಂದು ಸಂಶೋಧನಾ ಕಾರ್ಯಕ್ಕೆ ಅಷ್ಟಾಗಿ ಗಮನಕೊಟ್ಟಿಲ್ಲ. ಅನೇಕರಲ್ಲಿ ಸೀನಿಯಾರಿಟಿ ಓವರ್‌ಲುಕ್ ಆಗಿದೆಯೆಂಬ ಜಿಜ್ಞಾಸೆಯಿಂದ ಈ ಕಾರ್ಯ ಯಶಸ್ವಿಯಾಗಿಲ್ಲ. ಇದುಹಾಗೆ ಆಗಬಾರದು. ಉತ್ತಮ ತಳಿವಿಷಯದಲ್ಲಿ ಕ್ಯಾಟಲ್ ಬ್ರೀಡ್‌ಸ್ಕೀಂ ಯಾವರೀತಿ ಉಪಯೋಗ ಆಗಬೇಕೋ ಆರೀತಿ ಆಗುತ್ತಾಇಲ್ಲ. ತತ್ಪರಿಣಾಮವಾಗಿ ಎಲ್ಲಿ ಅತ್ಯುತ್ತಮ ಕ್ಯಾಟಲ್ ಫಾರ್ರಂಗಳಿವೆಯೋ ಅಲ್ಲಿ ಸರ್ಕಾರದವರೇ ಅವನ್ನು ತಮ್ಮ ಕಂಟ್ರೋಲ್‌ನಲ್ಲಿಟ್ಟುಕೊಂಡು ತನ್ಮೂಲಕ ಉತ್ತಮ ಬೀಜವನ್ನು ಉತ್ಪಾದನೆ ಮಾಡುವುದರಿಂದ ಅತ್ಯುತ್ತಮವಾದ ತಳಿ ಹೆಚ್ಚಿನಮಟ್ಟದಲ್ಲಿ ಅಭಿವೃದ್ಧಿ ಆಗಬೇಕೆಂದು ನಾನು ಈ ಸಂದರ್ಭದಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಈಗಿನ ಸನ್ನಿವೇಶದಲ್ಲಿ ಕ್ಯಾಟಲ್ ಬ್ರೀಡ್‌ಸ್ಕೀಂನಿಂದ ರೈತರಿಗೇ ಆಗಲೀ ಅಥವಾ ಸರ್ಕಾರಕ್ಕೇ ಆಗಲೀ ಯಾವರೀತಿಯಲ್ಲೂ ಉಪಯೋಗವಾಗುತ್ತಾಇಲ್ಲ. ಕ್ಯಾಟಲ್ ಬ್ರಿಡಿಂಗ್ ಇಟ್ಟುಕೊಂಡಿರುವವರು ಎಷ್ಟು ಜನದೇಶದಲ್ಲಿ ಇದ್ದಾರೆಂಬುದಕ್ಕೆ ಅಂಕಿಅಂಶವನ್ನು ನೋಡಿದರೆ ಅದರಿಂದಲೇ ಅರ್ಥವಾಗುತ್ತದೆ. ಇನ್ನು ಅಮೇರಿಕಾ, ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಹೋಗಿ ನೋಡಿದರೆ ನಮ್ಮ ದೇಶದಲ್ಲಿ ಉಂಟಾಗತಕ್ಕ ರಿಸರ್ಚ್ ಕೆಲಸ ಕಾರ್ಯಗಳು ಎಂದಿಗೂ ಹೋಲುವುದಿಲ್ಲ. ಅಲ್ಲಿಯ ಜನಗಳು ಎಲ್ಲಿ ಏನು ಸಿಕ್ಕುತ್ತದೆ ಎಂಬ ಆಧಾರದಮೇಲೆ ರಿಸರ್ಚ್‌ಮಾಡಿ ಯಾರೇ ಯಾವುದೋ ದೇಶದಲ್ಲಿ ಪ್ರಚಾರಮಾಡಿದ್ದನ್ನು ಇಲ್ಲಿ ಹೇಳುವುದರಿಂದ ಅರ್ಥವಾಗುವುದಿಲ್ಲ.

3-00 P.M.

ಸೊಸೈಟಿಗಳ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಸೊಸೈಟಿಯ ಆಡಳಿತದಲ್ಲಿ ಬ್ಲಾಟಿಂಗ್ ಪೇಪರ್ ಯಾವ ನೀರನ್ನೇ ಆಗಲಿ, ಬಚ್ಚಲು ನೀರನ್ನೂ ಸಹ ಹೀರಿ ಹಾಕಿ ಬಿಡುವಂತೆ,

(ಶ್ರೀ ಟಿ. ಎಸ್. ಶಂಕರಪ್ಪ)

ಕೆಲವು ಜನರು ಸೇರಿಕೊಂಡು, ಸರ್ಕಾರದ ಹಣವನ್ನು ಹಾಳುಮಾಡುತ್ತಿದ್ದಾರೆ. ಕಾರಣ, ಸೊಸೈಟಿ ಜನಗಳಮೇಲೆ ಡಿಫಾಲಕೇಶನ್ ಅಪಾದನೆ ಬಂದಾಗ ಅವರು ಸರ್ಕಾರದ ಮೇಲೆ ಇನ್‌ಫ್ಲೂಯನ್ಸ್ ತರುತ್ತಾರೆ, ಆವಾಗ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಹಿಂಜರಿಯುತ್ತಾರೆ. ಹೀಗಾದರೆ ಸಹಕಾರ ತತ್ವ ಜಯಪ್ರದವಾಗಲು ಸಾಧ್ಯವೇ? ಸೊಸೈಟಿ ಹಣ ದುರುಪಯೋಗಪಡಿಸಿದವರ ಮೇಲೆ ಅಗತ್ಯವಾದ ಕ್ರಮವನ್ನು ಕೈಗೊಳ್ಳಬೇಕು.

ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಎನ್.ಇ.ಎಸ್. ಬ್ಲಾಕುಗಳಿಗೆ ಕೊಟ್ಟಿರುವ ಜೀಪುಗಳನ್ನು ಉಪಯೋಗಿಸುವುದಕ್ಕೆ ಸರ್ಕಾರದವರು ಒಂದು ಸೂಚನೆ ಕೊಡಬೇಕು ಎಂದು ಸಲಹೆ ಮಾಡುತ್ತೇನೆ. ಇದಕ್ಕೆ ತಾಲ್ಲೂಕು ಬೋರ್ಡಿನಲ್ಲಿ ಒಂದು ಕಮಿಟಿ ಮಾಡಬೇಕು. ಅವರು ಈ ಜೀಪುಗಳನ್ನು ಯಾವ ಉದ್ದೇಶಕ್ಕೋಸ್ಕರ ಉಪಯೋಗಿಸಬೇಕೆಂದು ಒಂದು ನಿಯಮಾವಳಿ ಹಾಕಬೇಕು. ಆ ನಿಯಮಾವಳಿಯಂತೆ ಮುಂದಿನ ಎರಡು ತಿಂಗಳುಗಳಲ್ಲಿ ಜೀಪನ್ನು ಯಾವ ಯಾವ ಕೆಲಸಗಳಿಗೆ ಉಪಯೋಗಿಸಬೇಕು, ಯಾವಯಾವ ಕೆಲಸಗಳಿಗೆ ಉಪಯೋಗಿಸಬಾರದೆಂಬ ಬಗ್ಗೆ ನಿರ್ದಿಷ್ಟವಾದ ಸೂಚನೆ ಕೊಡಬೇಕು.

ನೀವು ಈ ಸೋಶಿಯಲ್ ವೆಲ್ ಫೇರ್ ಬೋರ್ಡಿಗೆ ನೇಮಿಸುವ ಲೇಡೀ ವಿಲೇಜ್ ಲೆವಲ್ ವರ್ಕರ್ಸ್ ಮತ್ತಿತರ ಲೇಡಿ ಅಧಿಕಾರಿಗಳಿಗೂ, ಹಳ್ಳಿಗಾಡಿನ ಹೆಂಗಸರಿಗೂ ಸಂಪರ್ಕವೇ ಇಲ್ಲ. ಅವರ ಉಡಿಗೆ ತೊಡಿಗೆಗಳಿಗೂ, ವೇಷಭೂಷಣಕ್ಕೂ, ಹಳ್ಳಿಗಾಡಿನ ಹೆಣ್ಣುಮಕ್ಕಳಿಗೆ ಜೀವನ ಕ್ರಮಕ್ಕೂ ಬಹಳ ಅಂತರ ವಿರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಒಬ್ಬರೊಬ್ಬರಿಗೆ ಕೋ–ಆಪರೇಶನ್ ಇಲ್ಲ. ಈ ತರಹ ಲೇಡಿ ಅಧಿಕಾರಿಗಳನ್ನು ಸೋಶಿಯಲ್ ವೆಲ್‌ಫೇರ್ ಬೋರ್ಡಿಗೆ ಆರಿಸಿದರೆ ಸಮಾಜದ ಉದ್ಧಾರವಾಗುತ್ತದೆಯೇ? ಹಳ್ಳಿಗಳಲ್ಲಿರತಕ್ಕ ನಾಗರಿಕತೆ, ಊಟ, ಹೆಂಗಸರ ಉಡಿಗೆ ತೊಡಿಗೆಗೆ ಹೊಂದಿಕೊಂಡು ನಿಮ್ಮ ಲೇಡಿ ಅಧಿಕಾರಿಗಳ ಜೀವನ ಕ್ರಮವಿರಬೇಕು. ನಿಮ್ಮ ಲೇಡಿ ಇನ್ಸ್‌ಪೆಕ್ಟರೋ, ಅವರ ಹೆಸರೇನೋ ಮರೆತು ಹೋಗಿದೆ, ಅವರು ಒಂದು ಹಳ್ಳಿಗೆ ಬಂದಾಗ, ಅವರು ಹಾಕಿರತಕ್ಕಂಥ ಉಡಿಗೆ, ಅವರು ಮುಖಕ್ಕೆ ಹಾಕಿದಂಥ, ಬಣ್ಣ, ಹಿಡಿದಂಥ ಚೀಲ, ಅವರ ವಹಿವಾಟು ಬಿನ್ನಾಣ ಮುಂತಾದ್ದನ್ನೆಲ್ಲಾ ನೋಡಿ, ಯಾರೋ ಬಂದರೆಂದು ಗಾಬರಿಯಾಗಿ ಹೆಂಗಸರು ಮನೆ ಬಾಗಿಲು ಹಾಕಿಕೊಂಡರು. ಅವರುಗಳು ಮುಖಕ್ಕೆ ಬಣ್ಣ ಹಾಕಿಕೊಳ್ಳುವುದು, ತುಟಿಗೆ ಟೂಟ್‌ಪಾಲಿಶ್ ಹಾಕಿಕೊಳ್ಳುವುದು, ಮುಂತಾದುದನ್ನು ಹಳ್ಳಿಗಳಿಗೆ ಬಂದಾಗ ಮಾಡಿಕೊಳ್ಳುವುದು ಬೇಡವೆಂದು ಹೇಳುತ್ತಿದ್ದೇನೆ. ಅಷ್ಟು ವಿದ್ಯಾ ವಿಥತಿ ವಿನಯಂ ಎಂಬಂತೆ ಅವರಲ್ಲಿ ವಿನಯವಿರಬೇಕು; ಅವರು ಹಾಕಿಕೊಂಡು ಬರುವ ಉಡಿಗೆ ತೊಡಿಗೆ, ಉಡುಪು ಮುಂತಾದುವು ನಮ್ಮ ರೈತ ಜನಗಳ, ಹಳ್ಳಿಯ ಹೆಂಗಸರ ನಾಗರೀಕತೆಗೆ ಹೊಂದಿಕೊಂಡಿರಬೇಕೆಂದು ಅರಿಕೆ ಮಾಡಿಕೊಂಡು, ಅಧ್ಯಕ್ಷರು ಇಷ್ಟು ಅವಕಾಶಕೊಟ್ಟಿದ್ದಕ್ಕೆ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಕೆ. ಕಂಬ್ಳಿ.—(ಕುಂದಗೋಳ) ಮಾನ್ಯ ಸಭಾಪತಿಗಳೇ ನಮ್ಮ ಮುಂದಿರತಕ್ಕ ಐದು ಡಿಮ್ಯಾಂಡುಗಳನ್ನು ಸಂಪೂರ್ಣವಾಗಿ ಸ್ವಾಗತಿಸಿ ಒಂದೆರೆಡು ಸಲಹೆಗಳನ್ನು ಕೊಡುತ್ತೇನೆ.

ಈಗ ಕೆಲವು ನಮ್ಮ ಸ್ನೇಹಿತರು ಈ ಡಿಮ್ಯಾಂಡುಗಳ ಮೇಲೆ ಕೆಲವು ಟೀಕೆ ಟಿಪ್ಪಣಿಗಳನ್ನು ಮಾಡಿದರು. ಅವುಗಳನ್ನು ಮಾಡಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ ಆದರೆ ಆ ಟೀಕೆ ಟಿಪ್ಪಣಿಗಳು ವಿಧೇಯಕರಾಗಿರಬೇಕು, ವಿಘಾತರವಾಗಿರಬಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಟೀಕೆಗಳಿಂದ ಕೆಲಸ ಚೆನ್ನಾಗಿ, ಸುಲಲಿತವಾಗಿ ಆಗಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಅವುಗಳನ್ನು ಮಾಡಬೇಕೇ ಹೊರತು, ಕೆಲಸ ಕೆಟ್ಟು

ಹೋಗಬೇಕು ಎಂಬ ಉದ್ದೇಶದಿಂದ ಮಾಡಬಾರದು ಎಂದು ನಾನು ಅವರಲ್ಲಿ ಕೇಳ ಬಯಸುತ್ತೇವೆ.

ನಮ್ಮ ದೇಶದಲ್ಲಿ ವ್ಯವಸಾಯ ಉದ್ಯೋಗದಲ್ಲಿ 100ಕ್ಕೆ 75 ಜನರಿದ್ದಾರೆ. ಬಹು ಸಂಖ್ಯಾತ ಜನರು ಈ ಉದ್ಯೋಗದಲ್ಲಿ ತೊಡಗಿದ್ದರೂ ಆಹಾರದ ಪೂರೈಕೆಯನ್ನು ಮಾಡಲಿಕ್ಕೆ ಆಗಿಲ್ಲ. ಇದರಲ್ಲಿ ಹಲವು ಕಾರಣಗಳಿವೆ. ಸಾಗುವಳಿಯಲ್ಲಿರುವ ಭೂಮಿಯಲ್ಲೆಲ್ಲಾ ಉತ್ಪತ್ತಿ ಯಾಗುತ್ತಿಲ್ಲ. ಭೂಮಿ ಕೊಡಬೇಕಾದರೆ ಅದರಲ್ಲಿ ಗರಿಕೆ, ಗೇಕು, ಚೌಳು ಎಂಬ ಚೌಳ ಬಂಥಂಥ ಭೂಮಿಗಳು ಇರುತ್ತವೆ, ಅಂಥ ಭೂಮಿಯಿಂದ ಉತ್ಪತ್ತಿಯಾಗುವುದಿಲ್ಲ. ಅದೂ ಅಲ್ಲದೆ ಸರ್ವಸಾಧಾರಣವಾಗಿ ರೈತರ ಸ್ವಾಧೀನದಲ್ಲಿಡಬೇಕೆಂಬ ಭೂಮಿಯಲ್ಲಿ ಅರ್ಧಕ್ಕಿಂತ ಹೆಚ್ಚು ಭೂಮಿ ಅವನ ನಿಜವಾದ ಸ್ವಾಧೀನದಲ್ಲಿರುವುದಿಲ್ಲ. ಉಳುವವನೇ ಸಂಪೂರ್ಣವಾಗಿ ಮಾಲಿಕನಾಗುವ ತನಕ, ಇದು ಹೀಗೆಯೇ ನಡೆಯುತ್ತದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ ಆದಕಾರಣ ಭೂಮಿ ಉಳುವವನಿಗೆ ಬೂಮಾಲಿಕನಾಗಬೇಕು.

ಭೂಮಿ ಚೆನ್ನಾಗಿ ಆಗಬೇಕಾದರೆ ಟ್ರಾಕ್ಟರ್ ಮತ್ತು ಬುಲ್ ಡೋಜರುಗಳ ಸಹಾಯ ಅವಶ್ಯಕ ಯಾವ ಭೂಮಿಯಲ್ಲಿ ಗರಿಕೆ, ಗೇಕು ಇರುತ್ತದೆ, ಅಲ್ಲಿ ಚೆನ್ನಾಗಿ ಉತ್ಪತ್ತಿ ಯಾಗುವುದಿಲ್ಲ. ಸಾಮಾನ್ಯವಾಗಿ ಎರಡೋಕಾಲು ಭಾಗ ಭೂಮಿಯಲ್ಲಿ ಉತ್ಪತ್ತಿಯಾಗು ತ್ತಿರುತ್ತದೆ; ಬಾಕಿ ಮುಕ್ಕಾಲು ಭಾಗ ಉತ್ಪತ್ತಿ ಇಲ್ಲದೆ ಹಾಗೆಯೇ ಇರುತ್ತದೆ. ಆದಕಾರಣ ಎಲ್ಲಾ ತಾಲ್ಲೂಕಿನಲ್ಲಿಯೂ ಟ್ರಾಕ್ಟರ್ ಇದ್ದೇ ಇರಬೇಕು. ಈ ಟ್ರಾಕ್ಟರುಗಳನ್ನೂ, ಬುಲ್ ಡೋಜರುಗಳನ್ನು ರೈತರಿಗೆ ಕೊಡುವಾಗ ಅವರಿಂದ ಅದರ ಖರ್ಚನ್ನು ತೆಗೆದುಕೊಳ್ಳು ತ್ತಾರೆ. ಹೀಗೆ ತೆಗೆದುಕೊಳ್ಳುವಾಗ, ಹಣವನ್ನು ಕೆಲವು ಕಂತುಗಳ ಮೇಲೆ ವಾಪಸ್ಸು ತೆಗೆದು ಕೊಳ್ಳಬೇಕು.

ಪೀಕು ಬರಬೇಕಾದರೆ, ಗರಿಕೆ ತೆಗೆಯುವುದರ ಜೊತೆಗೆ, ರಸಾಯನಿಕ ಗೊಬ್ಬರದ ಅವಶ್ಯ ಕತೆಯನ್ನೂ ಪೂರೈಸಬೇಕು. ಗೊಬ್ಬರ ಸಾಕಷ್ಟು ಇದ್ದರೇ ಸರಿಯಾದ ಪೀಕು ಬರುತ್ತದೆ, ಆದರೆ ರಸಾಯನಿಕ ಗೊಬ್ಬರ ಸಿಗುತ್ತಿಲ್ಲ. ಇದನ್ನು ಎಲ್ಲರಿಗೂ ತಾಲ್ಲೂಕು ಮಟ್ಟದಲ್ಲಿ ಒಂದು ಸೊಸೈಟಿಯ ಮೂಲಕವೋ, ಪಂಚಾಯಿತಿಯ ಮೂಲಕವೋ ಹಳ್ಳಿಗಳಲ್ಲಿ ಹಂಚುವ ವ್ಯವಸ್ಥೆ ಯನ್ನು ಮಾಡಬೇಕು. ನಮ್ಮ ಸ್ನೇಹಿತರು ಕೆಲವರು ಕಂಪೋಸ್ಟ್ ಗುಂಡಿಗಳ ವಿಷಯ ಹೇಳಿ ದರು. ಒಂದು ತಾಲ್ಲೂಕಿಗೆ ಅಥವ ಒಂದು 200-300 ಹಳ್ಳಿಗಳಿಗೆ ಒಂದು ಕಂಪೋಸ್ಟ್ ಗುಂಡಿ ಒಂದೇ ಕಡೆ ತೆಗೆದರೆ ಅದರಿಂದ ಕೆಲವು ಜನರಿಗೆ ಉಪಕಾರವಾಗಬಹುದು. ಆದರೆ ಎಲ್ಲರಿಗೂ ಗೊಬ್ಬರ ಸಿಗುವ ವ್ಯವಸ್ಥೆ ಮಾಡಿದರೆ ರೈತರಿಗೆಲ್ಲಾ ಉತ್ತೇಜನ ಕೊಟ್ಟಂತಾಗುತ್ತದೆ.

ಮತ್ತೊಂದು ವಿಚಾರ ಏನೆಂದರೆ—ಬರಿ ಗೊಬ್ಬರ ಒಂದನ್ನು ಕೊಟ್ಟಮಾತ್ರಕ್ಕೆ ಹೆಚ್ಚು ಬೆಳೆ ಬರುತ್ತೆಂದು ಹೇಳುವುದಕ್ಕಾಗುವುದಿಲ್ಲ. ಹೆಚ್ಚು ಬೆಳೆ ಉತ್ಪನ್ನ ತೆಗೆಯಬೇಕಾದರೆ ಪೈರುಗಳಿಗೆ ಬರತಕ್ಕ ರೋಗಾದಿಗಳನ್ನು ಮೊದಲು ತಡೆಗಟ್ಟಬೇಕು. ಇಲ್ಲಿಯತನಕ ಏನೇ ರಿಸರ್ಚ್ ಆಗಿದ್ದರು ಆ ನಮ್ಮ ಗೋಧಿ ಬೆಳೆಗೆ ಇನ್ನೂ ಯಾವ ರಿಸರ್ಚ್‌ಕೂಡ ನಡೆದಿಲ್ಲ. ನಮ್ಮ ಪ್ರಾಂತ ಸುಮಾರು ಐದು-ಐದೂವರೆ ತಾಲ್ಲೂಕಾಗಳಲ್ಲಿ ಗೋಧಿ ಏನಾ ಮತ್ತೇನನ್ನೂ ಅಷ್ಟು ಹೆಚ್ಚಾಗಿ ಬೆಳೆಯುವುದಿಲ್ಲ. ಅಲ್ಲಿ ಆಗಿಂದಾಗ್ಗೆ ಈ ಗೋಧಿಗೆ ಒಂದು ಬಗೆಯ ರೋಗ ಪದೇ ಪದೇ ಬರುತ್ತದೆ. ಹೀಗಾಗಿ ಅಲ್ಲಿ ಜನರಿಗೆ ಈ ಗೋಧಿ ಪೀಕು ಏನಿದೆ ಇದು ಸರಿಯಾಗಿ ಒಂದು ವರ್ಷ ಸಹ ಬಂದಿಲ್ಲ. ನಾವು ಈ ಹಿಂದೆ ಬೊಂಬಾಯಿ ಸರ್ಕಾರದಲ್ಲಿದ್ದಾಗ ಈ ಬಗ್ಗೆ ರಿಸರ್ಚ್ ನಡೆಸಲು ಮಹಾಬಲೇಶ್ವರಕ್ಕೆ ಕಳುಹಿಸುತ್ತಿದ್ದೆವು. ಈಗ ಅದು ತಪ್ಪಿಹೋಯಿತು. ನಮ್ಮಲ್ಲಿ ಈ ರೋಗ ನಿವಾರಣೆ ಬಗ್ಗೆ ಒಂದು ರಿಸರ್ಚ್ ನಡೆಸಬೇಕೆಂದು ನಾಲ್ಕು ವರ್ಷಗಳಿಂದಲೂ ಪದೇ ಪದೇ ಒತ್ತಾಯ ಮಾಡುತಲೇ ಬಂದಿದ್ದೇವೆ. ಆದರೆ ಇನ್ನೂವರೆಗೆ ಏನೂ ಮಾಡಿಲ್ಲ. ಈಗ

(ಶ್ರೀ ಟಿ. ಕೆ. ಕಂಬ್ಳಿ)

ರಾದರೂ ಸರ್ಕಾರದವರು ಜರೂರಾಗಿ ಈ ಗೋಧಿ ಬೆಳೆಗೆ ಬರತಕ್ಕ ರೋಗವನ್ನು ತಡೆಗಟ್ಟಲು ರಿಸರ್ಚ್ ಕ್ರಮಗಳನ್ನು ಮಾಡಬೇಕೆಂದು ಹೇಳಬಯಸುತ್ತೇನೆ. ಹೀಗೇ ಗೋಧಿ ಬೆಳೆಗೆ ರೋಗ ತಗುಲುತ್ತಿರುವಂತೆ ನಮ್ಮ ಕಡೆ ಇನ್ನು ಆ ಹತ್ತಿ ಹಾರಕ, ನವಣೆ, ಉದ್ದು–ಇತ್ಯಾದಿ ಬೆಳೆಗಳಿಗೂ ಕೂಡ ರೋಗ ತಗುಲುತ್ತಿದೆ. ಪೀಕೆಲ್ಲಾ ಕೆಟ್ಟುಹೋಗುತ್ತಿದೆ. ಇವುಗಳನ್ನೆಲ್ಲಾ ತಡೆಗಟ್ಟಲು ಸರ್ಕಾರದವರು ಕೂಡಲೇ ರಿಸರ್ಚ್ ಕಾರ್ಯಕ್ರಮ ಕೈಗೊಳ್ಳಲೇ ಬೇಕೆಂದು ಒತ್ತಿಹೇಳಬಯಸುತ್ತೇನೆ. ಇದರ ಜೊತೆಗೆ ಕ್ರಾಪ್-ಪ್ರೊಟೆಕ್ಷನ್ ಮಾಡಲು ವಿಮಾ ಕ್ರಾಪ್-ಇನ್‌ಷೂರೆನ್ಸ್ ಪದ್ಧತಿಯನ್ನೂ ಕೂಡ ಬೇಗ ಜಾರಿಗೆ ತರಬೇಕೆಂದು ಸೂಚಿಸ ಬಯಸುತ್ತೇನೆ. ಯಾರ್‍ಯಾರು ಈ ಬೆಳೆಯನ್ನು ಎಷ್ಟೆಷ್ಟು ಬೆಳೆಯುತ್ತಾರೋ ಅಷ್ಟಕ್ಕೆ ಇಂತಿಷ್ಟು ಬೆಳೆಯನ್ನು ವಿಮಾ ಮಾಡಲೇಬೇಕೆಂಬ ನಿಯಮವನ್ನು ಜಾರಿಗೆ ತರುವುದು ಒಳ್ಳೇದೆಂದು ನಾನು ಹೇಳ ಬಯಸುತ್ತೇನೆ.

ಇನ್ನು ರೈತಾಪಿ ಜನರಿಗೆ ಅವಶ್ಯಕವಾಗಿ ಬೇಕಾಗುವ ರಂಟೆ-ಕುಂಟೆ, ಕೂರಿಗೆ, ಚಕ್ಕಡಿ ಇವುಗಳನ್ನೆಲ್ಲಾ ಕಾಲಕ್ಕೆ ಸರಿಯಾಗಿ ಸಿಗುವ ವ್ಯವಸ್ಥೆಮಾಡಬೇಕು. ಈ ಹಿಂದಿದ್ದ ಮಂತ್ರಿಗಳು ತಾಲ್ಲೂಕು ಒಂದೊಂದಕ್ಕೆ ಒಂದೊಂದು ಸಹಕಾರ ಸಂಸ್ಥೆಯನ್ನು ಏರ್ಪಡಿಸಿ, ಈ ಸಾಮಾನುಗಳನ್ನೆಲ್ಲಾ ಒದಗಿಸುವ ಏರ್ಪಾಡು ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಈಗಲಾದರೂ ಸರ್ಕಾರದವರು ಕೂಡಲೇ ಈ ಸಹಕಾರ ಸಂಸ್ಥೆಗಳನ್ನು ಪ್ರತಿಯೊಂದು ತಾಲ್ಲೂಕಾದಲ್ಲೂ ತೆರೆದು ರೈತರಿಗೆ ಈ ವ್ಯವಸಾಯದ ಮುಟ್ಟುಗಳು ಸಲೀಸಾಗಿ ಸಿಗೋಹಾಗೆ ಮಾಡಬೇಕೆಂದು ಹೇಳ ಬಯಸುತ್ತೇನೆ.

ಇನ್ನು ಪಶು ಸಂಗೋಪನ ವಿಚಾರ ಹೇಳುವುದಾದರೆ ಈಗ ಸರ್ಕಾರದವರೇನು 25 ಸಾವಿರ ರಾಸುಗಳ ಗೊಂದರಂತೆ ಒಂದೊಂದು ಆಸ್ಪತ್ರೆಗಳನ್ನು ತೆಗೆದಿದ್ದಾರೋ ಇದನ್ನು ಹತ್ತು ಸಾವಿರ ರಾಸುಗಳ ಗೊಂದರಂತೆ ಈ ಸಂಖ್ಯೆಯನ್ನು ಇಳಿಸಬೇಕೆಂದು ಹೇಳಬಯಸುತ್ತೇನೆ. ಇದರಿಂದ ತಾಲ್ಲೂಕು ರೈತರಿಗೆ ತುಂಬಾ ಅನುಕೂಲವಾಗುತ್ತದೆ. ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳುವುದಾದರೆ–ಈ ದಿವಸ ನಮ್ಮಲ್ಲಿ ಕುರಿಗಳಿಗೆ ಒಂದು ಬಗೆ ರೋಗ ಬರುತ್ತೆ. ಒಂದು ಕುರಿಗೆ ಆ ರೋಗ ತಗುಲಿದರೆ ಆ ಹಿಂಡು ಕುರಿಗಳೆಲ್ಲ ಹಿಂದಿಗೆ ಹಿಂದೇ ಒಟ್ಟಿಗೆ, ಸತ್ತುಹೋಗುತ್ತವೆ. ಈ ಕುರಿಗಳನ್ನು ಸಾಕತಕ್ಕವರೆಲ್ಲ ಬಡವರು. ಅವರ ಅನುಕೂಲಕ್ಕಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ 2--3 ಆಸ್ಪತ್ರೆಗಳನ್ನು ತೆರೆದು ಅವು ಒಂದು ಜಾಗದಲ್ಲಿರದೆ ಇಡೀ ತಾಲ್ಲೂಕಾದಲ್ಲ ಸಂಚಾರ ಮಾಡುವಂತೆ ಮಾಡಬೇಕು. 10 ಸಾವಿರ ಕುರಿಗಳಿರುವ ಕಡೆ ಈ ಒಂದು ಆಸ್ಪತ್ರೆ ಇರಬೇಕು. ಅಂತೂ ಈ ರೋಗವನ್ನು ಸರ್ಕಾರದವರು ಕೂಡಲೇ ತಡೆಗಟ್ಟಲು ಸೂಕ್ತ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಗ್ರಾಮಾಭಿವೃದ್ಧಿರಸ್ತೆಗಳ ವಿಚಾರದಲ್ಲಿ ಎರೆನಾಡಿನಲ್ಲಿ ರಸ್ತೆಗಳಿಲ್ಲದಿದ್ದರೆ ಜನರ ವ್ಯವಹಾರ ಚಲೋರೀತಿಯಲ್ಲಿ ನಡೆಯಲು ಸಾಧ್ಯವಿಲ್ಲ. ನಮ್ಮ ಎರೇನಾಡಿನಲ್ಲಿ ಹಳ್ಳಿಯಿಂದ ಹಳ್ಳಿಗೆ ಎಲ್ಲಿಯೂ ರಸ್ತೆಗಳೇಇಲ್ಲ. ಈ ಪ್ರದೇಶದಲ್ಲಿರತಕ್ಕ ಎಲ್ಲಾ ಹಳ್ಳಿಗಳಿಗೂ ಕೂಡಲೇ ರಸ್ತೆ ಸೌಕರ್ಯ ಕಲ್ಪಿಸಿಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri B. G. KHOT (Sadalga).—Sir, there are 4 or 5 Demands before us and one of them is Agriculture. A demand for more than 2½ crores,

is made to defry the charges of the department. Of course, it is necessary to grant this demand and while doing so, I would like to make a few suggestions.

The most important suggestion that I would like to make is in respect of extensive and intensive cultivation should be implemented. Extensive and cultivation is the mother of all other productions and the mother of all developments. Therefore, it should be given the top priority. Of these two I feel that intensive cultivation is more important for producing more food. As regards extensive cultivation, while we distribute lands for cultivation, it is very necessary to see whether the land that is granted distributed for this purpose, may it be forest land or otherwise, is suitable for cultivation, and whether it is cultivable land. Then again, in intensive cultivation, soil test and soil conservation are the most important factors. Soil test, unfortunately, has not advanced much. An arguement is advanced in this respect that Soil test will be made only alongwith survey and resettlemen,. I would suggest that all steps should be taken immediately to have the soil test and soil conservation and necessary provision should be made for this purpose with no delay. There are several varieties of land and to grow more food grain or for more-productions in those lands, soil test and soil conservation is very necessary, Therefore, priority should be given to this first.

The other thing which I want to stress is about the supply of implements for agriculture. Now, in almost all the villages, bullocks are used to draw water from wells for irrigation purposes where there are no irrigation facilities. This is an out-moded method and helps very little to grow more food. So, Government should supply irrigation pump sets along with electricity and this would be more useful an more beneficial. Like wise small Horse Power impliments for ploughing and for similar order purposes of cultivation should also be provided.

In our State not much is done in the matter of educating the agriculturists and in the matter of technical know how. Therefore, I have said in my last speech on the third five-year plan that film shows and similar advertisements etc. propaganda should be aranged at taluk level. Thus technical know, how should be spread among the agriculturists in order to held them to produce more.

Another great hardship experienced by the agriculturist is the fact that he has to pay very high rates of interest in respect of the loans he borrows. Despite the assurances given on behalf of Government on the floor of this House, it is an unfortunate fact that the co-operative institutions are not prepared to advance loans to needy agriculturists. A survey of rural indebtedness among them should be made immediatly and measures ought to be devised to give them adequate loan facilities with cheap rates of interest, both for the purpose of enabling them to return their old loans and also for meeting costs of cultvation, and maintaining themselves.

(Sri B. G. KHOT)

My friend Sri Kambli just now pleaded for the introduction of cattle, crop and fire insurance schemes. It is well-known that in alternative years cattle diseaseas, or crop diseases or accidental fires, afflict the rural folk as a result of which they suffer huge losses. Therefore as a protection against such risks, I endorse Sri Kambli's request, with a suggestion that such insurunce should be provided as all these risks.

I have frequently suggested to the Co-operation Minister to establish regulated marketting facilities, particularly in my area where tobbacco has to be marketted. The tobacco grower are subjected to severe hardship and they suffer under handicaps. They are unable to obtain a fair price in the absence of a regulated market. They are therefore constrained to dispose off there produce at very low price to the merchants. I would once again emphasise the need for regulated market in our area for tobacco along with the establishment of ware houses and service co-operatives and multipurpose co-operatives should be converted into service co-operatives if the service, co-operatives are not going to be readily established. Without fair price to the cultivator intensive production is impossible. He finds it quite unremunerative. Both agriculture and the agriculterist will suffer. So, provisions for fair prices to the cultivator are quite necessary.

On the question of Follidol, I wish to submit that there is large-scale misuse of this deadly poisonous substance. In my neighbourhood, some people particularly females, use it and mix it with coffee or tea, in order to seek vengeance. I suggest that this substance should be used only by the village panchayats and be not given to individuals or or be sold in the market. Strict control is necessary over the use of Follidol. In fact, the agriculturists should be charged be the Village panchayats for supply and use of this substance on his behalf and thus misuse should be prevented.

Regarding animal husbandry. A provision for 1¼ crores has been made. I submit that a master-plan for the whole state for milk supply and production is necessary. Milk is a very healthy and nutritious food. I can speak from my experience. ನಾನು ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಮನೆಯೊಳಗೆ ಒಬ್ಬ ಬೇಡರ ಜಾತಿಯ ಕೆಲಸ ಮಾಡುವ ಆಳು ಮನುಷ್ಯ ಇದ್ದ(!) ಅವನು ಒಂದು ದಿವಸದಲ್ಲಿ ನಾಲ್ಕು ಸಾರಿ ಊಟ ಮಾಡುತ್ತಿದ್ದನು. ಒಂದು ಸರತಿ ಊಟಕ್ಕೆ ಅವನಿಗೆ ಎಂಟು ಹತ್ತು ಜೋಳದ ರೊಟ್ಟಿಗಳು ಬೇಕಾಗುತ್ತಿದ್ದವು. ಅಂದರೆ ಒಂದು ದಿವಸಕ್ಕೆ ಸುಮಾರು 30–40 ರೊಟ್ಟಿಗಳನ್ನು ಅವನು ತಿನ್ನುತ್ತಿದ್ದನು. ಇಷ್ಟು ಜೋಳದ ರೊಟ್ಟಿಗಳನ್ನು ಮಾಡಿ ಅವನಿಗೆ ಊಟಕ್ಕೆ ಹಾಕುವುದಕ್ಕೆ ಮನೆಯಲ್ಲಿ ಹೆಣ್ಣುಮಕ್ಕಳು ಬೇಸತ್ತುಹೋದರು. ಯಾಕೆಂದರೆ ಮತ್ತೆ ಐದಾರು ಆಳುಗಳು ಮನೆಯಲ್ಲಿ ಇದ್ದರು. ಏನು ಮಾಡಬೇಕು ತಿಳಿಯಲಿಲ್ಲ. ಇಷ್ಟು ಜನಕ್ಕೆ ಅಡಿಗೆ ಮಾಡುವುಕ್ಕೆ ಹೆಂಗಸರು ಒಪ್ಪಲಿಲ್ಲ. ಇದೇ ಸಮಯದಲ್ಲಿ ಸುದೈವದಿಂದ ಒಂದು ಯೋಚನೆ ಹೊಳೆಯಿತು. ಮತ್ತು ಒಂದು ಪ್ರಯೋಗ ಮಾಡಿ ನೋಡಿದೆವು. ಆಗ್ಗೆ ನಮ್ಮಲ್ಲಿ ಒಂದು ಎಮ್ಮೆ ಈಯುವದಕ್ಕೆ ಬಂದಿತ್ತು. ಮನೆಯಲ್ಲಿಯ ಆ ಎಮ್ಮೆ ಕರು ಹಾಕಿದ

ನಂತರ ಅದರ ಹೈನದಿಂದ ದೊರೆಯುವ ಹಾಲು ಮೊಸರು ಮಜ್ಜಿಗೆ ಮುಂತಾದವುಗಳನ್ನು ಈ ಆಳುಗಳಿಗೆ ಕೊಡಲ್ಪಟ್ಟಿತು. ಎರಡು ಮೂರು ತಿಂಗಳು ಕಾಲ ಎಮ್ಮೆಯ ಹೈನದಿಂದ ಆಳು ಮನುಷ್ಯನಿಗಿ ಪುಷ್ಟಿ ದೊರೆತು ಅವನು ದಿನಕ್ಕೆ 2—3 ಸಾರಿ ಊಟ ಮಾಡಹತ್ತಿದನು. ಮತ್ತು ಒಂದು ಸಾರಿ ಊಟಕ್ಕೆ 3 ಜೋಳದ ರೊಟ್ಟಿ ತಿನ್ನುವುದಕ್ಕೆ ಪ್ರಾರಂಭಿಸಿದನು. 10 ರೊಟ್ಟಿ ತಿನ್ನುವವನು 3 ರೊಟ್ಟಿ ತಿನ್ನುವುದಕ್ಕೆ ಬಂದನು· ಯಾಕೆಂದರೆ ಹಾಲು ಮೊಸರು ಮಜ್ಜಿಗಿಯಿಂದ ಅವನಿಗಿ ಸಾಕಷ್ಟು ಪುಷ್ಟಿ ದೊರೆಯುವದಕ್ಕೆ ಪ್ರಾರಂಭವಾಯಿತು. ಅವನ ಜಠರಾಗ್ನಿ ಶಮನವಾಯಿತು. ನಾನು ಹೇಳುವ ಉದ್ದೇಶವೇನೆಂದರೆ ಹಾಲು ಮೊಸರು ಬೆಣ್ಣೆ ಮಜ್ಜಿಗಿ ಮುಂತಾದ ಹೈನದ ಪದಾರ್ಥಗಳನ್ನು ತಿಂದರೆ ಪುಷ್ಟಿ ದೊರೆತು ಜಠರಾಗ್ನಿ ಶಮನವಾಗುತ್ತದೆ. ಆರೋಗ್ಯ ಚೆನ್ನಾಗಿರುತ್ತದೆ. ಜೋಳ, ಗೋಧಿ, ಅಕ್ಕಿ ತಿನ್ನುವುದು ತಾನಾಗಿಯೇ ಕಡಿಮೆಯಾಗುತ್ತದೆ. ಆದುದರಿಂದ ಪರದೇಶ ಧಾನ್ಯ ತರಿಸಿ ಸಾಲಮಾಡಿ ಗೋಡಾನ ಕಟ್ಟಿಸಿ ಇಟ್ಟುಕೊಂಡರೆ ಪಡುವುದಕ್ಕಿಂತ, ದೇಶದಲ್ಲಿ ಒಳ್ಳೇ ಹಾಲಿನ ಉತ್ಪಾದನೆ ಹೆಚ್ಚಿಸಿ ಒಳ್ಳೇ ಹಾಲು ಒದಗಿಸಿ ಕೊಟ್ಟರೆ, ಆಹಾರ ಅಭಾವದ ಪ್ರಶ್ನೆ ಸಹಜ ಬಗೆಹರಿಯುತ್ತದೆ.

ಅಧ್ಯಕ್ಷರು.—ಒಂದು ಗಾಧೆ ಮಾತು ಇದೆ. ಜೋಳದ ಜೊತೆಗಿ ಹೈನ ಊಟಮಾಡು ಎಂದು ಅದರೆ ಈಗ ಜೋಳವೂ ಸಿಕ್ಕುವುದಿಲ್ಲ ಹೈನವೂ ಸಿಕ್ಕುವುದಿಲ್ಲ.

The House adjournd for recess at Thirty Minutes past two of the Clock and reassembled at three of the clock

---

[Mr. DEPUTY SPEAKER in the Chair]

Sri B. G. Khot :—

I was speaking about the master for milk production & supply and how it is of very much use to the whole country. It will help to lessen the consumption of food, remove diseases and it will help in the family planning also. If a person uses sufficient quantity of milk and ghee etc., it is by experience I am telling that there will be less percent of population. It is apetite-hunger, heat that is more reason for the growth of population. Along with the master plan there should be some training courses for increase of milk production at each and every taluk or Block level. Provision should be made for these in the Third Plan. Besides this, in every village at last 1/5 of land of the village or, at least as much as uncultivable land should be reserved for fodder for cattle. Trees giving nutritions food and Grass should be grown there and the Village panchayat should manage those farms. There are also quite a number of useless animals. According to my opinion they should not be sent to slaughter houses. In Taluk or in suitable centres or in forest areas a centre should be opened and all the useless and old animals should be sent there and guarded. This will go to solve the cattle manure problem to some extent.

I will now come to the subject of co-operation. I shall give one or two suggestions. with regard to tobacco there should be some arrangements for direct contact of purchasers with the societies.

(Sri B. G. Khot)

I have already dealt with warehouses and regulated markets.

Coming to Planning and Development though we have now entered into the Third Five-Year plan, still we are as if in the Second five year plan beeause, 75% of the amont the Third Five Year plans is going to be spent on the spill-over schemes of the Second Five-year plan. So, it is more or less the continuation of the Second Five Year plan rather than the Third Five-Year plan. What is required for the implementation of the blan and Development schemes is machinery, appropriation and puplic co-operation. We all say that machinery is inefficient, corrupt and all that quite true. Appropriation is also sometimes misappopriation. There is lack of publc co-operation also. I have bitter experience about public co-operation. I dare say that a majority of the public has also become corrupt. because they are all hankering after money. This is espcially so in the case of peole connected with public works. Government must take precautionary measures against all these immoral and underhand dealings. Development works should gradually proceed along with thair returns wherever possible . It is no use hastening. If at to hasten, we should hasten slowly so that there would be less of floating of loans and less of misappropriations, and also less of taxatins upon the the public. so the particular precauticn that Government should take such a situation is, that they should not try to only speed at the development works by merely raising much loans or by incurring huge debts. or by leving more taxations but should see tha tthey are properly appropriated. They should go in for gradual and rational development and ensure reasonable returns on all their investments, so that there can be less corruption and less misappropriation. You should see that your money is Spent propely according to the return you get. No. doubt, you will try to invest money. you will raise loan and do everything that is in your hands. Spending the targeted amount should not be the only main objective but the reaching of the targets with the minimum of expenditure with the reasonable returns should be the objective. other wise, ಅದು ನೂರೆಂಟ್ಟು ತೊಮ್ಮತ್ತ ಉದಹಾರಣ್ರವಿದೆ. there for, Development should be gradual. They should hasten slowly. That will bring in commensurate returns, prevent corruption and misappopriation help and in many ways.

The village panchayats should be given free scopes at their own and levels they should be allotted at least 50 to 60% of the funds. The village panchayat should be given full powers to carry out development works within its own Jurisdiction Similarly, the taluk board should be given full powers in this behalf at the taluk level and at the State level every major work should be taken up by the State Government. The village panchayat should carry out its obligatory duties, and it should be given much more powers powers Judicial powers should not be given to it at this stage. All the development works should be entrusted to it under strict and proper supervision and guidance.

of the Government without this, it will be all in vain to entrust to it. In this way, if the village panchayat looks after the development works within its jurisdiction and the Taluk Board looks afterthe development works within its own jurisdiction, then, there will not be much work left for Government except big and major works. When the Village Panchayats Bill was discussed here, I had also suggested that 50 to 60% of the fund should be alloted to the villages on these conditions. The rules and regultions yru have framed under the Village panchayats Act go hard with the villagers and they are not able to understand them even till education and literacy be spread far and wide and till they have a more experience of administration and also a sense of duty and responsibility they will not be able to carry on their businesses according to your rules and regulations.

According to my opinion, the Gramsevaks are are of no use and are quite redundant. Instead of being any help to the villages they are proving to be a curse on them. At the Taluka level, some more circles in their places as much is necessary, and through them all the efforts of supervision guidance etc. over the village panchayats should be directed. The same is the case with Gram Sevikas. The presanc expenditure in Rs. 12 lakhs alloted five years for this purpose in each Block is unnecessarily spent and the same can be used for developmental expeditures in return.

One more thing is necessary to be told and that is that regionwise backwardness should be taken into consideration Some regions may be backward in communications; some may be backward in education; some may be backward in industry; some may be backward in irrigation and so on. In our budget no provision of such kind has been made in this respect in the Capital Account or Revenue Account deal with region wise backwardness.

Sri K. S. SURYANARAYANA RAO.—In balanced development, all factors are taken into consideration.

Sri B. G. KHOT.—Which area is backward and in what respect it is backward should be taken into consideration and in this way we should try to srlve the problem of backwardness, and try also to bring all the different areas on one equalng footing first. From the point of view of economy and from the point of view of development. even though you disagree with me, reconstitution of districts and taluks is necessary. From the point of view of administrative convenience also, the reconstituion of districts and taluks is most necessary. They may be reconstituted from these point of view of economy, development and oduministrive works and taking also into cosideration whether it is a famine area or malnad area and so on.

† Sri M. Y. GHORPADE (Sandur).—Mr. Speaker, Sir, I wish to utilise the the time at my disposal this afternoon only to deal with one special problem which is rather special for Bellary and of very serious nature, namely, problem of irrigation under Tungbhadra Dam. Well,

(Sri M. Y. GHORPADE)

Sir, as you know, our Prime Minister once called big dams as modern temples. If these huge dams are to be looked upon by the people as modern temples, they have to be symbol of modern development and real progress. But for some reason or other, the big dams have become symbol of monument of waste in practicality and it would be unrealstic for us to expect the raiyats to have any reverential attitude towards them. Sir, I may be pardoned if I tend to over emphasise things which may be slightly excessive. If I do so, it is only to impress upon the Government that the problem of Bellary has been long neglected and it merits the the most urgent attention of this Government. Sir, I say with all sincerity that the problems of Tungabhadra irrigation are of such magnitude and of such farreaching consequences that if the Mysore Government recognises what difficulties are and take steps to set them right, I have no hesitation in saying that within the next three to five years a situation which is very favourable would be created in the whole of that irrigation Plan. Sir I may be pardoned if I said that I feel rather sad and also surprised that in spite of the repeated representations from the M.L.As. from Bellary as well as Jagirdars of the affected areas, the Government if I may sayso has adopted an ostrich like policy of conveniently closing its eyes to certain difficulties. In view of postponement of decision which might be of a difficult nature, the raiyats are becoming increasingly desparate every day. There is already confusion and if the problem is is not tackled immediately, this confusion will become worst confounded in the next 3 to 5 years and I would not be surprised if it leads even to murders I wish to say that the problem is very simple.

Sri C. K. RAJAIAH SHETTY.—May I know whether my Hon'ble friends is dealing with Agriculture or Irrigation ?

Sri M. Y. GHORPADE.—It is agricultural problem. The idea was to irrigate 90,000 acres in one district alone out of 3 lakhs of acres in the whole area. It is a problem of land. If that extent of land is not created, then we must know what are the difficulties of the raiyats. If this is not a problem under Agriculture, then I do not know what problem can be discussed under Agriculture.

Sri C. J. MUCKANNAPPA.—You may say that water is not made use of fully. If you go on just dealing with Irrigation, how does it come under Agriculture Demand ?

Sri M. Y. GHORPADE.—If you will permit me, I shall explain in breef what are the difficulties. Tungabhadra Project is a unique project. There is no other project compared to that in the whole of the country because it envisages three types of cultivation, perennial cultivation for sugracane, wet cultivation for paddy and also dry-cum-wet cultivation. Out of 90,000 acres irrigated by this dam, 60,000 acres are to be under dry cum wet cultivation. In Demarcating these things, various things have to be taken into consideration, and the

cultivator is not able to understand on what basis land has been demarcated. We must first examine why is it they called this type of cultivation, perennial, partly wet and partly dry. It is best expressed in the words of Raghavan who was an expert I.C.S Officer and who went into this question. He has stated in the report that Tungabhadra Project was first conceived as a scheme for irrigation of wet crops but as now evolved is a scheme of irrigation meant chiefly for irrigated dry crops. The main reasons for the change are that the soil of the tract was unsuited for heavy irrigation and that the raiyats of the area are not used to wet cultivation and that wet irrigation would increase the incidence of malaria. He has given an expert opinion but all these reasons do not hold good. The only idea of this project was to give water to as many cultivators as possible and therefore this very novel scheme of dry cum wet cultivation was drawn up. It is to give water to a cultivator once for 15 days, and he is supposed to grow with that dry crops such as groundnut, etc. Now I must first of all ask how these things are demarcated. There are no doubt principles on which land was demarcated as dry cum wet or wet or pernnial. It was done on scientific principles. But the cultivator is not able to understand why a particular land was demarcated as dry cum wet or perennial area. He is confused. He has got an impression that a huge giant has gone about the area and demarcated the lands arbitrarily.

3-30 P.M.

This is the impression that the cultivator has got. So, the very approach of distributing water is one of frustration and one of dis-satisfaction. I made this general remarks just to apprise the Government about the immpression of the cultivators in Bellary District. In order to understand this problem, we have to ask ourselves two questions. One is, are the cultivators getting the assured water supply for their crops. The second is, are the cultivators satisfied with the present supply of water to their lands. As I have already stated that the water-rate is calculated on the basis of water duty. That is the basic calculation.. Every acre of land should get 2-3" of water either during nights or during day for dry cum wet crops. Water duty is calculated on the basis of one cusecs of water will irrigate about 50 acres of wet lands and 160 acres of dry land. Now, we have to consider whether the raiyats are getting so much of water to their lands. So far as dry cum wet cultivation is concerned, the people are not getting the required quantity of water. If they are not getting so much water, then the Government should not collect water-rate from those people. In short, the cultivators are not getting the sufficient quantity of water for various reasons. The water duty is based upon, certain assumptions. For instance, it is based upon, giving water to wet lands during nights and for dry cum wet crops during day times. It is also based upon a distinction made between Hingari and Mungari crops. If these distinctions are not

(Sri M. Y. GHORPADE)

removed, then the Government will not be able to make this scheme a successful one. If the Government is not able to supply the assured quantity of water, then they are not justified in collecting the water-rate from the cultivators.

Then Sir, the water that is flowing through the sluices is not flowing according to the plan, or according to the assumption of the scheme of localisation.

Sri M. C. NARASIMHAN.— How is the Minister for Agriculture is able to answer to these points?

Sri C. J. MUCKANNAPPA.—These are not the relevant points which can be discussed under the agriculture demand.

Srimathi VIJAYARAGHAVENDRA RAO.— How did you discuss prohibition when the Police Demand had come up for discussion? He is impressing upon the need for improving the water supply.

Sri C. J. MUCKANNAPPA.—For enforcing prohibition, it is the duty of police to see that prohibition laws are enforced strictly, So, we casually referred to prohibition while speaking on police Demand.

Sri M. C. NARASIMHAN.—I want do know whether the Agriculture Minister wlll be able to answer to his points.

Sri C. J. MUCKANNAPPA.— It is only the Minister for Public Works who will be able to reply to his points, but not the Agriculture Minister.

Sri KADIDAL MANJAPPA.—What exactly is the difficulty with the other Hon'ble Members, I cannot understand. The Hon'ble Member is saying something about the development of irrigation in Tungabhdra.

Sri U. M. MADAPPA.—I cannot understand how the senior-most member is supporting to his points when it is not at all relevant to the demand under discussion.

Sri M. Y. GORPHADE.—Therefore, Sir, the Government must take immediate steps to provide water to wet cum dry cultivation.

Now, I come to the most precise Department viz., the Agriculture Department. I am sure, the Hon'ble Members on the opposite will not dispute about the atitude of agriculturists to the present type of agriculture. I have already dealt with the problem of distributing the water. There is the difficulty of manure. The land will be spoilt if we irrigate it without manure. At present, there is not much manure available to the raiyats. The experts have stated that about 40 ponds of nitrogen is sufficient for one acre of land. It is impossible to get so much quantity of manure. The non-availability of labour is another important factor which has come in the way of improving the agriculture in Bellary District. Agricultural operations cannot be done with the help of bullocks, it requires machanisation. The cultivator wants water only when the rains fail. If water is not supplied to him when the rain has failed, his crops will be spoilt.

Of cause experts will say that the raiyats cannot make much use of the Sirguppa farm because there is non-availability of water, non-availability of Labour also ; and the greatest factor is uncertainty about water. The raiyat is not sure that even after investing so much money, he will get adequate quantity of water. After all, even with adequate water, the return is not very attractive. When that is the case, the cultivator in order to take up his venture, he must be sure of getting adequate supplies of water. There is another problem. Because of this uncertainity, the achkatdars who are expected to operate under this dry-cum-wet irrigation, make use of this water for their paddy crops or Sugar-cane crops. There is almost a grabbing of water and it is of a very serious nature because many of the people are not using only that water which they are expected to use under the the dry-cum-wet scheme. people use it auhtorisedly and un-authorisedly and if this sort of a thing is allowed to develop on a large scale, in its train, will bring in its own problem which cries out for solution. Something has to be done. At least the Government should step in and take proper steps to see that this problem will not develop into such huge proportions.

Therefore, Sir, it is Sir, very interesting to see what the Government experts Mr. Therumale Iyengar has said. A very competent officer by name Sri T. N. S.Raghavan was appointed by the Madras Government to go into the matter and suggest remedial measures. He has also gone through the scheme prepared by Shri Thirumale Iyengar. What happened was, Sri T. N. S. Raghavan is one of the most competent officers in Madras. He says—"whatever may have been the atititude of the raiyats in the past, they are now very anxious to have water for pernnial crops......"

If irrigation is not of wet crops, they do not want the project at all with the liability of pulsory water rate for the irrigation. After all the project is intended......

Sri C. J. MUCKANNAPPA.—I want to know whether this document is permissible to be read in this House ? and whether it is available with our Government ?

Mr.DEPUTY SPEAKER.—It is a document on agriculture.

Sri M. Y. GHORPADE.—This is the Thungabhadra project low-level canal scheme, printed by the Government of Madras. It is an official publication of the Madras Government.

Therefore, he comes to the conclusion that the project is intended for the benefit of the raiyat and if there should be any chance of this project proving a success, it is mhch better that the raiyat is assured of adequates of water supply necessary for wet irrigation. If you insist on this dry-cum-wet irrigation, it may not be very succesful.

That is the view expressed by Mr. Raghavan.

Sri C. J. MUCKANNAPPA.—Was he an agriculural expert ?

Sri M. Y. GHORPADE.—He was an I. C. S. officer.

Sri C. J. MUCKANNAPPA.—We cannot take I. C. S. officers to be *Sarvagnas* Sir.

Sri M. Y. GHORPADE.—Yes. Dr. Nagangowda when he speakes will explain to you more clearly about this problem.

Sir, before I make some humble suggestions, as to how this problem should be met, I would like to spend just a minute on the incidental problem which merits consideration :

(1) No water rate should be levied on raiyats unless the Government is able to supply water to the entire acreage on the basis of data calculated by them ;

(2) The problem of seepage has to be tackled. One patch of land is given water. The land next to that is not given water and again another patch adjacent to that is given. So, the intermediate patches of lands, they do not get the benefit of water. But there is this problem of seepage It is not the fault of the culivator. Therefore the Govrnment should give adequate compensasion. Government will have to look into this.

(3) Unauthorised cultivation is taking place, Government perhaps is allowing this because they want to step up food production by some means or other. But it cannot countinue endlessly.

The solution of this problem is not easy and all that the atchkatdars of Sirguppa ask is, that you should appoint a special high power Committe to go into this problem.

Sri M. RAMAPPA.—I rise to a point of order Sir, I would like to know from the Hon'ble Speaker whether these solutions and suggestions arise in connection with the Demands placed before us ? These are suggestions which he can give the Party Meeting. The Hon'ble Minister for Agriculture who is in charge of these Demand, I do not think he is competent look to into these mattes.

Mr. DEPUTY SPEAKER.—They come under agriculture, Sri Ramappa has not in the House when the same point was raised and it has been settled already. The ruling was given.

Sri N. RACHAIAH.—The Hon'ble Member was speaking about the competency of the Agricultural Minister in this respect. He may be assured about it. The Hon'ble Mr. Ghotpade is not reffering to the distribution of water only. He is saying has to how it should be utilised.You know the distribution of water is actually regulated by the law and rules laid down in that behalf. He is now referring to certain points and giving suggestions which are very relevant and pertinent and they are connected with Agriculture - He is saying how the farmers have special difficuities and how these difficulties should be

solved in using the water from the Thungabhadra project. I think the entire matter would be examined. It really concerns the Agricultural Department also.

ಶ್ರೀ ರೇವಣ್ಣಸಿದ್ದಪ್ಪ.—ಹಾಗಾದರೆ, ವ್ಯವಸಾಯಕ್ಕೆ ಬೇಕಾದ ಕಬ್ಬಿಣದ ಕಾರ್ಖಾನೆಯನ್ನು ತರಬಹುದು ; ಫರ್ಟಿಲೈಸರ್ ಫ್ಯಾಕ್ಟರಿಯನ್ನು ಹೇಳಬಹುದು. ಕೊನೆಗೆ ವ್ಯವಸಾಯಗಾರರಿಗೆ ಅವಶ್ಯಕವಾದ ಔಷಧಿಯೂ ಕೂಡ ಬರಬಹುದು. ಅಲ್ಲಿಗೆ General discussion in Budget ಮಾಡಿದ ಹಾಗೆ ಇದನ್ನೂ ಮಾಡಬೇಕಾಗುತ್ತದೆ.

